# ಹಂಪಿ ಟೈಮ್ಸ್

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 294 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 01.06.2025 • ಭಾನುವಾರ • ಪುಟ:04 • ಬೆಲೆ:2
Volume:02 • Issue: 294 • PRGI No:KARKAN/2023/88055 • VIJAYANAGARA • 01.06.2025 • Sunday • Page:04 • Rs:2



HAMPI TIMES
PRINT & DIGITAL
Daily NEWS PAPER
To book Classified Display Ad in HAMPI TIMES Please call on
9448633038
Bring your product to local hearts




ಮನಸ್ಸು ಎಲ್ಲದಕ್ಕೂ ಮೂಲ,
ಅದನ್ನು ಸರಿಪಡಿಸಿಕೊಳ್ಳದ ಹೊರತು
ಇನ್ನಾವುದು ಸರಿಯಾಗದು
– ಡಿ.ವಿ.ಜಿ

## ದೇವಾಲಯ ದರ್ಶನ




ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಆನಂದ ಬಾಣ




# ಕುಟುಂಬದ ನೆಮ್ಮದಿಗೆ ತಂಬಾಕು ಸೇವನೆ ತ್ಯಜಿಸಿ

## ಸಿವಿಲ್ ನ್ಯಾಯಾಧೀಶ ಪ್ರಶಾಂತ್ ನಾಗಲಾಪುರ್ ಹೇಳಿಕೆ। ಗುಟ್ಕಾ ಜಾಹೀರಾತುಗಳು ಯುವಕರನ್ನು ದಾರಿತಪ್ಪಿಸುತ್ತಿವೆ

## ದುಶ್ಚಟಗಳ ದಾಸರಾದರೆ ಬದುಕು ವಿನಾಶ। ಸರ್ಕಾರ-ಸಂಘ ಸಂಸ್ಥೆಗಳು ಜನರಲ್ಲಿ ಹೆಚ್ಚೆಚ್ಚು ಜಾಗೃತಿ ಮೂಡಿಸಬೇಕು

■ **ಹಂಪಿ ಟೈಮ್ಸ್ ಹೊಸಪೇಟೆ**

ದುಶ್ಚಟಗಳಿಗೆ ದಾಸರಾಗುವ ಮುನ್ನ ನಿಮ್ಮ ಜೀವ ಮತ್ತು ಜೀವನದ ಮೌಲ್ಯ ಅರಿತರೇ ತಂಬಾಕು ಉತ್ಪನ್ನಗಳಿಂದ ದೂರವಿರಲು ಸಾಧ್ಯವಾಗಲಿದೆ ಎಂದು ಗೌರವಾನ್ವಿತ ಸಿವಿಲ್ ನ್ಯಾಯಾಧೀಶರಾದ ಪ್ರಶಾಂತ್ ನಾಗಲಾಪುರ ಹೇಳಿದರು.

ನಗರದಲ್ಲಿ ಜಿಲ್ಲಾಡಳಿತ, ಜಿಪಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸರ್ವೇಕ್ಷಣಾ ಘಟಕ, ಪೊಲೀಸ್ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ತಾಲೂಕು ಕಾನೂನು ಸೇವೆಗಳ ಪ್ರಾಧಿಕಾರ ವತಿಯಿಂದ ವಿಶ್ವ ತಂಬಾಕು ರಹಿತ ದಿನಾಚರಣೆ ನಿಮಿತ್ತ ಏರ್ಪಡಿಸಿದ್ದ ಜಾಗೃತಿ ಜಾಥಕ್ಕೆ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿ ಶನಿವಾರ ಅವರು ಮಾತನಾಡಿದರು. ತಂಬಾಕು ಮತ್ತು ನಿಕೋಟಿನಂತಹ ಉತ್ಪನ್ನಗಳಿಗೆ ಯುವಜನತೆ ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ಭಾರತದಲ್ಲಿ ಸುಮಾರು 26.7 ಕೋಟಿಗೂ ಅಧಿಕ ಜನ ತಂಬಾಕು ಬಳಕೆದಾರರಿದ್ದು, ಪ್ರತಿ ವರ್ಷ 13.5 ಲಕ್ಷಕ್ಕೂ ಹೆಚ್ಚು ಜನರು ತಂಬಾಕು ಸೇವನೆ ಸಂಬಂಧಿತ ಕಾಯಿಲೆಗಳಿಂದ ಸಾವಿಗೀಡಾಗಿದ್ದಾರೆ. ವಿಪರ್ಯಾಸವೆಂದರೇ ಶೇ.47.6 ರಷ್ಟು ತಂಬಾಕು ಬಳಕೆದಾರರು ಗ್ರಾಮೀಣ ಪ್ರದೇಶದವರಾಗಿದ್ದು, ಕರ್ನಾಟಕದಲ್ಲಿ ಶೇ.22.8 ರಷ್ಟು ವ್ಯಕ್ತಿಗಳು ಯಾವುದಾದರೊಂದು ರೀತಿಯ ತಂಬಾಕು ಉತ್ಪನ್ನಗಳನ್ನು ಸೇವನೆ ಮಾಡುತ್ತಿದಾರೆ. ಆರೋಗ್ಯಕರ ಜೀವನ ನಡೆಸುವ ನಿಟ್ಟಿನಲ್ಲಿ ಸಾರ್ವಜನಿಕರು ತಂಬಾಕು ಉತ್ಪನ್ನಗಳ ಕರಾಳ ಉದ್ದೇಶಗಳನ್ನು ಅರಿತುಕೊಳ್ಳಬೇಕು. ತಂಬಾಕು ಮುಕ್ತ ಜಿಲ್ಲೆಯನ್ನಾಗಿಸಲು ಸಾರ್ವಜನಿಕರ ಸಹಕಾರ ಬಹಳ ಮುಖ್ಯವಾಗಿದೆ. ತಂಬಾಕು ಬಳಕೆಯಿಂದ ಹೃದಯ ಸಂಬಂಧಿ ಹಾಗೂ ಕ್ಯಾನ್ಸರ್ ಕಾಯಿಲೆಗೆ ತುತ್ತಾಗುತ್ತಿದ್ದಾರೆ. ಬಾಯಿ, ರಕ್ತನಾಳಕ್ಕೆ ಹಾನಿ, ಕುತ್ತಿಗೆ ಮತ್ತು ಶಿರದ ಕ್ಯಾನ್ಸರ್, ಗಂಟಲು ಕ್ಯಾನ್ಸರ್, ಧ್ವನಿಪೆಟ್ಟಿಗೆ, ಮಿದುಳು, ಅನ್ನನಾಳ, ಶ್ವಾಸಕೋಶ, ಮೂತ್ರಪಿಂಡ, ಸ್ತನ ಕ್ಯಾನ್ಸರ್ ಸೇರಿದಂತೆ ದೇಹದ ವಿವಿಧ ಅಂಗಾಂಗಗಳಿಗೆ ಕ್ಯಾನ್ಸರ್‌ಗೆ ಕಾರಣವಾಗಲಿದೆ. ಸಾರ್ವಜನಿಕವಾಗಿ ತಂಬಾಕು ಸೇವೆನೆಯಿಂದಾಗುವ ದುಷ್ಪರಿಣಾಮಗಳ ಕುರಿತು ಸರ್ಕಾರ ಮತ್ತು ಸಂಘ-ಸಂಸ್ಥೆಗಳಿಂದ ಹೆಚ್ಚೆಚ್ಚು ಜಾಗೃತಿ ಮೂಡಿಸುವ ಕಾರ್ಯವಾಗಬೇಕಿದೆ ಎಂದರು.




ಅಪರ ಸಿವಿಲ್ ನ್ಯಾಯಾಧೀಶರಾದ ಶೃತಿ ತೇಲಿ ಅವರು ಮಾತನಾಡಿ, ಮಾಧ್ಯಮಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ತಂಬಾಕು ಮತ್ತು ಗುಟ್ಕಾ ಉತ್ಪನ್ನಗಳಿಗೆ ಅಕರ್ಷಣೀಯ ಜಾಹಿರಾತುಗಳು ಜನರನ್ನು ದಿಕ್ಕು ತಪ್ಪಿಸುತ್ತಿವೆ. ಚಿತ್ರನಟರೇ ಗುಟ್ಕಾ, ತಂಬಾಕು ಕಂಪನಿಗಳ ರಾಯಭಾರಿಯಾಗಿದ್ದಾರೆ. ಇದು ಸಾರ್ವಜನಿಕರ ಮೇಲೆ ತುಂಬಾ ಪ್ರಭಾವ ಮೂಡಿಸುತ್ತದೆ. ಮಹಿಳೆಯರು, ಮಕ್ಕಳು ತಂಬಾಕು, ಗುಟ್ಕಾದಂತಹ ದುಶ್ಚಟಗಳಿಗೆ ದಾಸರಾಗುತ್ತಿರುವುದು ಶೋಚನೀಯ.

ಇದಕ್ಕೂ ಮುನ್ನಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆವರಣದಿಂದ ವಿವಿಧ ಪ್ರಮುಖ ಬೀದಿಗಳಲ್ಲಿ ಮೂಲಕ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದವರೆಗೆ ಜಾಗೃತಿ ಜಾಥಾ ನಡೆಸಲಾಯಿತು. ಇದೇ ವೇಳೆ ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ಶಂಕರನಾಯ್ಕ.ಎಲ್ ಮಾತನಾಡಿದರು. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಧರ್ಮನಗೌಡ ಅವರು ತಂಬಾಕು ನಿಯಂತ್ರಣ ಮಾಡುವಂತೆ ಪ್ರತಿಜ್ಞಾ ವಿಧಿ ಬೋಧಿಸಿದರು.

ಜಾಥಾದಲ್ಲಿ ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಅಧಿಕಾರಿ ಡಾ.ಭಾಸ್ಕರ್, ವೈದ್ಯಾಧಿಕಾರಿ ಡಾ.ವಿನೋದ ಕುಮಾರ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಷಣ್ಮುಖ, ಜಿಲ್ಲಾ ಕುಷ್ಠರೋಗದ ನಿಯಂತ್ರಣ ಅಧಿಕಾರಿ ಡಾ.ರಾಧಿಕಾ, ತಾಲೂಕು ಆರೋಗ್ಯ ಅಧಿಕಾರಿ ಡಾ.ಬಸವರಾಜ, ತಂಬಾಕು ನಿಯಂತ್ರಣ ಕೋಶದ ಸಂಯೋಜಕ ಮಹಾಂತೇಶ್.ಬಿ. ಉಳ್ಳಾಗಡ್ಡಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ ಸೇರಿದಂತೆ ಶ್ರೀಸಪ್ತಗಿರಿ ವಿದ್ಯಾಲಯದ ನರ್ಸಿಂಗ್ ವಿದ್ಯಾರ್ಥಿಗಳು, ಟಿಎಂಎಇ ಸಂಸ್ಥೆಯ ನರ್ಸಿಂಗ್ ವಿದ್ಯಾರ್ಥಿಗಳು, ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರ ವಿಶ್ವವಿದ್ಯಾಲಯ ಟ್ರಸ್ಟ್‌ನ ಪದಾಧಿಕಾರಿಗಳು, ಆರೋಗ್ಯ ಇಲಾಖೆ ಸಿಬ್ಬಂದಿಗಳು ಭಾಗವಹಿಸಿದ್ದರು.

## ಉಚಿತ ಸ್ಪರ್ಧಾತ್ಮಕ ಪರೀಕ್ಷಾ ಪೂರ್ವ ತರಬೇತಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 2025-26ನೇ ಸಾಲಿನ ಯು.ಪಿ.ಎಸ್.ಸಿ ನಾಗರಿಕ ಸೇವೆ ಮತ್ತು ಬ್ಯಾಂಕಿಂಗ್ ಪಿ.ಒ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ಪರೀಕ್ಷಾ ಪೂರ್ವ ತರಬೇತಿ ನೀಡಲಾಗುತ್ತಿದ್ದು, ಆಸಕ್ತ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.08392-275751, ಸಹಾಯವಾಣಿ ಸಂ. 8050770006, 80503 70006 ಸಂಪರ್ಕಿಸಬಹುದು ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ತಿಳಿಸಿದ್ದಾರೆ.

## ಪ್ರವಾಸೋದ್ಯಮ: ಕೌಶಲ್ಯಾಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ಪ್ರವಾಸೋದ್ಯಮ ಇಲಾಖೆಯಿಂದ ಎಸ್.ಸಿ.ಎಸ್.ಪಿ, ಹಾಗೂ ಟಿ.ಎಸ್.ಪಿ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಪ್ರವಾಸೋದ್ಯಮ ಹಾಗೂ ಅತಿಥ್ಯ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿಗೆ ಅರ್ಜಿ ಅಹ್ವಾನಿಸಲಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕರಾದ ಪ್ರಭುಲಿಂಗ ಎಸ್.ತಳಕೇರಿ ತಿಳಿಸಿದ್ದಾರೆ.

ಆಸಕ್ತ ಅಭ್ಯರ್ಥಿಗಳು ಹೊಸಪೇಟೆ ತಾಲೂಕಿನ ಕಮಲಾಪುರ ಲೋಟಸ್ ಮಹಲ್ ಬಳಿಯ ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕರ ಕಚೇರಿಯಲ್ಲಿ ಜೂ.02 ರಿಂದ ಅರ್ಜಿ ಪಡೆದು, ಭರ್ತಿ ಮಾಡಿ ಜೂ.9 ರೊಳಗಾಗಿ ಇದೇ ಕಚೇರಿಗೆ ಸಲ್ಲಿಸಬೇಕು.

ಅಭ್ಯರ್ಥಿಯ ವಯಸ್ಸು ಕನಿಷ್ಠ 20 ರಿಂದ 45 ವರ್ಷದೊಳಗಿರಬೇಕು. ತರಬೇತಿಯ ವಿವರಗಳು : 1. ಆಹಾರ ಮತ್ತು ಪಾನೀಯ ಸೇವೆಯ ಉಸ್ತುವಾರಿ (ಫುಡ್ ಅಂಡ್ ಬೆವರೇಜ್ ಸರ್ವೀಸ್ ಸ್ಟೇವರ್ಡ್) : ತರಬೇತಿಯ ಕಾಲಾವಧಿ 4 ತಿಂಗಳು ಹಾಗೂ 10 ನೇ ತರಗತಿ ಉತ್ತೀರ್ಣರಾಗಿರಬೇಕು. 2. ಬಹು ತಿನಿಸು ಕುಕ್ (ಮಲ್ಟಿ ಕ್ಯೂಸೇನ್ ಕುಕ್) : ತರಬೇತಿಯ ಕಾಲಾವಧಿ 5 ತಿಂಗಳು ಹಾಗೂ 8 ನೇ ತರಗತಿ ಉತ್ತೀರ್ಣರಾಗಿರಬೇಕು. 3.ಕೊಠಡಿ ಪರಿಚಾರಕ (ರೂಂ ಅಟೆಂಡಂಟ್) : ತರಬೇತಿಯ ಕಾಲಾವಧಿ 4 ತಿಂಗಳು ಹಾಗೂ ಐದನೇ ತರಗತಿ ಉತ್ತೀರ್ಣರಾಗಿರಬೇಕು. ಹೆಚ್ಚಿನ ಮಾಹಿತಿಗಾಗಿ : ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕರ ಕಚೇರಿ ಅಥವಾ ದೂ.08394-295640 ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸರ್ಕಾರಿ ಪಾಲಿಟೆಕ್ನಿಕ್ ಡಿಪ್ಲೋಮಾ ಪ್ರವೇಶಾತಿಗೆ ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ 2025-26ನೇ ಸಾಲಿಗೆ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಕೋರ್ಸ್ ಪ್ರವೇಶಾತಿಗೆ ಆಫ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯನ್ನು ಕಾಲೇಜಿನಲ್ಲಿ ಪಡೆದುಕೊಂಡು ಅಗತ್ಯ ದಾಖಲೆಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಪಾಲಿಟೆಕ್ನಿಕ್‌ನ ಪ್ರಾಂಶುಪಾಲರ ಕಚೇರಿಗೆ ಜೂನ್ 02 ಸಂಜೆ 05 ಗಂಟೆಯವರೆಗೆ ಸಲ್ಲಿಸಬಹುದು. ಜೂನ್ 03 ರಂದು ಬೆಳಿಗ್ಗೆ 11 ಗಂಟೆಗೆ ತಾತ್ಕಾಲಿಕ ಮೆರಿಟ್ ಪಟ್ಟಿ ಪ್ರಕಟ, ಅಂದು ಸಂಜೆ 04 ರ ವರೆಗೆ ತಿದ್ದುಪಡಿಗೆ ಅವಕಾಶ, ಸಂಜೆ 05 ಗಂಟೆಯವರೆಗೆ ಅಂತಿಮ ಮೆರಿಟ್ ಪಟ್ಟಿ ಪ್ರಕಟಿಸಲಾಗುವುದು. ಜೂನ್ 04 ರಿಂದ ಪ್ರವೇಶ ಪ್ರಕ್ರಿಯೆ ಪ್ರಾರಂಭವಾಗಲಿದೆ.

ಹೆಚ್ಚಿನ ಮಾಹಿತಿಗಾಗಿ ನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜ್ ನ ಪ್ರಾಚಾರ್ಯರ ಕಚೇರಿ ಅಥವಾ ದೂ.08392-242228 ಗೆ ಸಂಪರ್ಕಿಸಬಹುದು ಎಂದು ಸರ್ಕಾರಿ ಪಾಲಿಟೆಕ್ನಿಕ್ ನ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನ ಪತ್ರಿಕೆ

Searching for the perfect platform to promote your brand?
Want to reach more people?
Choose HAMPI TIMES



Scan to read epaper

HAMPI TIMES
Kannada Daily News paper
Print & Digital Edition
Contact : 94486 33038
E-mail: hampitimes@gmail.com
www.hampitimes.com


**ಸರ್ಕಾರಿ ಶಾಲೆಯತ್ತ ಹೆಜ್ಜೆ ಹಾಕಿ, ಬಲಪಡಿಸಿ**

ಸರ್ಕಾರಿ ಶಾಲೆಗಳಲ್ಲಿ ನೀಡುವ ಶಿಕ್ಷಣ ಉಚಿತ
ಬಹುತೇಕ ಸರ್ಕಾರಿ ಶಾಲೆಗಳು
ಈಗ ಆಧುನಿಕ ಶಿಕ್ಷಣ ಸಾಧನಗಳನ್ನು
ಅಳವಡಿಸಿಕೊಂಡಿವೆ...

## ವಸತಿ ಶಾಲೆಗಳ ಪ್ರವೇಶಾತಿಗೆ ಕೌನ್ಸಲಿಂಗ್ ಆರಂಭ

■ **ಹಂಪಿ ಟೈಮ್ಸ್ ಹೊಸಪೇಟೆ**

2025-26 ನೇ ಸಾಲಿನ ಅಲ್ಪಸಂಖ್ಯಾತರ ಡಾ.ಎಪಿಜೆ. ಅಬ್ದುಲ್ ಕಲಾಂ ಮತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ 6ನೇ ತರಗತಿ ಪ್ರವೇಶಕ್ಕಾಗಿ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗಿದ್ದು, ಫಲಿತಾಂಶಗಳನ್ನು ಈಗಾಗಲೇ ಇಲಾಖೆ ಜಾಲಾತಾಣ ಮತ್ತು ವಸತಿ ಶಾಲೆಗಳಲ್ಲಿ ಪ್ರಕಟಿಸಲಾಗಿದೆ. ಜೂ.4 ಮತ್ತು ಜೂ.5 ರಂದು ಬೆಳಿಗ್ಗೆ 10 ಗಂಟೆಗೆ ಅಲ್ಪಸಂಖ್ಯಾತರ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ವಸತಿ ಶಾಲೆ, ಜಂಬುನಾಥ ಹಳ್ಳಿ, ಹೊಸಪೇಟೆ ಈ ವಸತಿ ಶಾಲೆಯಲ್ಲಿ ಕೌನ್ಸಲಿಂಗ್ ನಿಗದಿಯಾಗಿದ್ದು, 1:1 ರ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ಕೌನ್ಸಲಿಂಗ್‌ನಲ್ಲಿ ಭಾಗವಹಿಸಿ ಪ್ರವೇಶದ ಸೀಟನ್ನು ಆಯ್ಕೆ ಮಾಡಿಕೊಳ್ಳಲು ತಿಳಿಸಲಾಗಿದೆ. ಒಂದು ವೇಳೆ ಕೌನ್ಸಲಿಂಗ್ ಭಾಗವಹಿಸದೇ ಇದ್ದಲ್ಲಿ ಪ್ರವೇಶದ ಸೀಟ್ ರದ್ದಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಪ್ರಾಚಾರ್ಯರರು ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆ (ಸಿಬಿಎಸ್‌ಇ) ಜಂಬುನಾಥ ಹಳ್ಳಿ ಹೊಸಪೇಟೆ. ಮೊ.9901302904, ಪಾಂಶುಪಾಲರು, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ತಾಯಕನಹಳ್ಳಿ, ಕೂಡ್ಲಿಗಿ ಮೊ.9964915789, ಪಾಂಶುಪಾಲರು, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಹರಪನಹಳ್ಳಿ ಮೊ.9886512605, ಪಾಂಶುಪಾಲರು, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಮರಿಯಮ್ಮನಹಳ್ಳಿ ಮೊ.9964732718 ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ವಿಶೇಷ ಸೂಚನೆ:** ಕೌನ್ಸಲಿಂಗ್‌ಗೆ ಹಾಜರಾಗುವ ವಿದ್ಯಾರ್ಥಿಗಳು ತಪ್ಪದೇ ದಾಖಲೆಗಳನ್ನು ತೆಗೆದುಕೊಂಡು ಬರಬೇಕು. 5 ಪೋಟೋ, ಪ್ರವೇಶ ಪತ್ರ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ ಕಾರ್ಡ್, ವಿಶೇಷ ಕೋಟಾದಲ್ಲಿ ಆಯ್ಕೆಯಾದ ಪ್ರಮಾಣ ಪತ್ರ, 5ನೇ ತರಗತಿ ಅಂಕಪಟ್ಟಿ, ಎಲ್ಲಾ ದಾಖಲೆಗಳನ್ನು ದ್ವಿಪ್ರತಿಯಲ್ಲಿ ಜೆರಾಕ್ಸ್ ತರಬೇಕು.


Atlas Copco

Grow Your Business With Us

- SMALL COMPRESSORS
- MEDIUM COMPRESSORS
- LARGE COMPRESSORS
- ELECTRIC COMPRESSORS
- HOSEPIPE
- HAND-HELD TOOLS(JACKHAMMERS)
- DUST COLLECTORS
- DE-WATERING PUMPS
- SERVICE KIT & SPARE PARTS
- TAPER/IDS DRILL RODS



S.M.Traders & Services
Authorised Distributor for ATLAS COPCO Portable Screw Air Compressors for North Karnataka
Water Well and Non Water Well Applications
web: www.smtradersandservices.com
M: 9686663125 - 9686663132
Head Office- Hospet, Vijayanagara district, Karnataka
Branch office 1- Ilkal, Bagalkot district, Branch office 2- Vijayapura, Karnataka

## ಬೆಳಕಿನ ಹಾದಿ

# ದಿಕ್ಕು ತಪ್ಪಿದ ಸಂಸಾರ ನೌಕೆ

■ ಜಯಶ್ರೀ.ಎಂ.ಕರ್ಜಗಿ. ಹುಬ್ಬಳ್ಳಿ



ಗಾಯತ್ರಿ ಬಡ ಕುಟುಂಬದ ಹೆಣ್ಣು ಮಗಳು. ಬಾಲ್ಯದಲ್ಲಿಯೇ ತಂದೆ ತಾಯಿಯರನ್ನು ಕಳೆದುಕೊಂಡು ಅಕ್ಕನ ಆಶ್ರಯದಲ್ಲಿ ಬೆಳೆದವಳು. ಗಾಯತ್ರಿಯ ಅಕ್ಕ ಗಂಡನ ಕಿರುಕುಳ ತಾಳಲಾರದೇ ಅವನಿಂದ ವಿಚ್ಛೇದನ ಪಡೆದುಕೊಂಡು ಮಗಳೊಂದಿಗೆ ಪ್ರತ್ಯೇಕವಾಗಿ ಜೀವನ ಸಾಗಿಸುತ್ತಿದ್ದಳು. ಗಾಯತ್ರಿ ಕಷ್ಟಪಟ್ಟು ಓದಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಓದಿ ಸರಕಾರಿ ನೌಕರಿ ಪಡೆದುಕೊಂಡು ಅಕ್ಕನಿಗೆ ಆಸರೆಯಾದಳು. ಚಿಕ್ಕವಳಿದ್ದಾಗಿನಿಂದ ತನ್ನ ಮನೆತನದ ಕಷ್ಟಗಳನ್ನು ಹಾಗೂ ಅವಳ ಅಕ್ಕನ ದಿಕ್ಕು ತಪ್ಪಿದ ಸಂಸಾರವನ್ನು ನೋಡಿ ಬೆಳೆದ ಕಾರಣದಿಂದ ಜೀವನದಲ್ಲಿ ಯಾವ ಆಸೆ-ಆಕಾಂಕ್ಷೆಗಳನ್ನು ಇಟ್ಟುಕೊಂಡಿರಲಿಲ್ಲ. ಆದರೆ ಗಾಯತ್ರಿಯ ಅಕ್ಕನಿಗೆ ಅವಳ ಮಾಡುವ ಆಸೆ. ಗಾಯತ್ರಿಗೆ ಮದುವೆ ಮಾತೆತ್ತಿದರೆ ಆಗುತ್ತಿರಲಿಲ್ಲ. ಅವಳ ಅಕ್ಕ ಒತ್ತಾಯ ಮಾಡಿ ಬುದ್ಧಿ ಹೇಳಿ ಮದುವೆಗೆ ಒಪ್ಪಿಸಿದಳು. ಅಕ್ಕನ ಮಾತಿಗೆ ಕಟ್ಟುಬಿದ್ದು ಕೊನೆಗೂ ಮದುವೆಗೆ ಒಪ್ಪಿಕೊಂಡಳು. ಒಂದೊಳ್ಳೆ ಹುಡುಗನನ್ನು ನೋಡಿ ಗಾಯತ್ರಿಯ ಮದುವೆಯು ಶಾಸ್ತ್ರೋಕ್ತವಾಗಿ ಮುಗಿಯಿತು.

ಗಾಯತ್ರಿ ಗಂಡನ ಮನೆಯಲ್ಲಿ ಹೊಸ ಜೀವನ ಶುರುಮಾಡಿದಳು. ದುರ್ದೈವ ಎಂದರೆ ಅವಳ ಗಂಡ ಆಧ್ಯಾತ್ಮಕ ಕಡೆಗೆ ಹೆಚ್ಚು ಒಲವು ಹೊಂದಿರುವ ವ್ಯಕ್ತಿಯಾಗಿದ್ದ. ಲೌಕಿಕ ಬದುಕಿನ ಬಗ್ಗೆ ಹೆಚ್ಚು ಯೋಚಿಸುತ್ತಿರಲಿಲ್ಲ. ಕುಂಟುತ್ತಾ ಬಾಳ ಪಯಣ ಸಾಗಿತ್ತು. ಹೀಗೆ ಮುಂದೊಂದು ದಿನ ಗಾಯತ್ರಿ ಗರ್ಭಿಣಿಯಾದಳು. ಹೆರಿಗೆಗೆಂದು ಅಕ್ಕನ ಮನೆಗೆ ಬಂದಳು. ಅವಳಿಗೆ ಮುದ್ದಾದ ಹೆಣ್ಣು ಮಗುವೊಂದು ಜನಿಸಿತು. ಗಾಯತ್ರಿಯ ಪತಿ ಮಗುವನ್ನು ನೋಡಲೂ ಸಹ ಬರಲಿಲ್ಲ. ಗಾಯತ್ರಿ ಗಂಡನಿಗೆ ಮಗುವಿನ ನಾಮಕರಣಕ್ಕೆ ಬರಲು ತಿಳಿಸಿದಳು. ಅವನು ಏನೂ ಸರಿಯಾಗಿ ಮಾತನಾಡದೇ ಕಾಲ್ ಕಟ್ ಮಾಡಿದ್ದ. ಮರುದಿನ ಪುನಃ ಫೋನ್ ಮಾಡಿದಳು. ಏನಾಯ್ತು ಯಾಕೆ ಸರಿಯಾಗಿ ಮಾತನಾಡುತ್ತಿಲ್ಲ ಎಂದು ಕೇಳಿದಳು. ಆಗ ಗಂಡ ಹೇಳಿದ ಮಾತು ಕೇಳಿ ಗಾಯತ್ರಿ ಶಾಕ್ ಆದಳು. ಅದೇನೆಂದರೆ 'ನನಗೆ ಮದುವೆ ಇಷ್ಟವಿರಲಿಲ್ಲ. ಹಿರಿಯರ ಒತ್ತಾಯಕ್ಕೆ ಹಾಗೂ ಮನೆಯವರ ಮಾತಿಗೆ ಕಟ್ಟುಬಿದ್ದು ಮದುವೆಗೆ ಒಪ್ಪಿಕೊಂಡೆ. ನನಗೆ ಸಂಸಾರ, ಹೆಂಡತಿ-ಮಕ್ಕಳು, ಮನೆ ಯಾವುದೂ ಇಷ್ಟ ಇಲ್ಲ. ಸಾಕ್ಷಾತ್ಕಾರಕ್ಕಾಗಿ ಸನ್ಯಾಸತ್ವ ಪಡೆದಿದ್ದೇನೆ' ಎಂದು ಹೇಳಿದ. ಮುಂದುವರೆದು 'ನಿನಗೂ ಮಗುವಿನ ಜೀವನಕ್ಕೂ ತೊಂದರೆಯಾಗದಂತೆ ವ್ಯವಸ್ಥೆ ಮಾಡುತ್ತೇನೆ. ಮಗುವನ್ನು ಚೆನ್ನಾಗಿ ನೋಡಿಕೊ' ಎಂದು ಹೇಳಿ ಫೋನ್ ಇಟ್ಟುಬಿಟ್ಟ.

ಗಂಡನ ಈ ಮಾತು ಕೇಳಿ ಗಾಯತ್ರಿಗೆ ಬರಸಿಡಿಲು ಬಡಿದಂತಾಯಿತು. ಮಗುವನ್ನು ನೋಡಿ ಕಣ್ಣೀರು ಹಾಕಿದಳು. ಮುಂದೇನು? ಎನ್ನುವ ಯೋಚನೆಯಲ್ಲಿ ಗೋಳಾಡಿದಳು. ಲೌಕಿಕ ಜೀವನದಲ್ಲಿದ್ದುಕೊಂಡು ಆಧ್ಯಾತ್ಮದ ಸಾಧನೆ ಮಾಡಿದವರು ಸಾಕಷ್ಟು ಜನರಿದ್ದಾರೆ. ಶಿಶುನಾಳ ಶರೀಫ, ಭಕ್ತ ಕುಂಬಾರ, ತುಳಸಿದಾಸರು ಹೀಗೆ ಉದಾಹರಿಸುತ್ತಾ ಹೋದರೆ ಲೆಕ್ಕವಿಲ್ಲದಷ್ಟು ಸಾಧಕರು ನಮ್ಮ ಕಣ್ಣಮುಂದೆ ಇದ್ದಾರೆ. ವಿಪರ್ಯಾಸ ಎಂದರೆ ಗಾಯತ್ರಿಯ ಪತಿ ಒಂದು ಮಗುವಿನ ತಂದೆಯಾಗಿ ಆಗತಾನೇ ಜಗತ್ತಿಗೆ ಪರಿಚಯವಾದ ಮಗುವಿನ ಮುಖವನ್ನೂ ನೋಡದೇ ಅವರನ್ನು ಪರಿತ್ಯಜಿಸಿದ್ದು ಅಕ್ಷಮ್ಯ ಅಪರಾಧ ಅಲ್ಲವೇ?. ಯಾವುದೇ ಆಸೆ ಆಕಾಂಕ್ಷೆ ಬಯಕೆಗಳಿಲ್ಲದ ಗಾಯತ್ರಿ ಜೀವನದಲ್ಲಿ ಮದುವೆ ಎಂಬ ಹಂದರದಲ್ಲಿ ಹೊಸತನದ ಚಿಗುರೊಡೆದಿದ್ದವು. ಆದರೆ ಅವಳ ಪತಿಯ ನಿರ್ಧಾರದಿಂದ ಅವಳ ಸಂಸಾರ ದಿಕ್ಕು ತಪ್ಪಿದ ನೌಕೆಯಂತಾದುದು ವಿಪರ್ಯಾಸ ಅಲ್ಲವೇ?

## ನಿಮ್ಮ ಬೆಂಬಲವೇ ನಮ್ಮ ಬಲ

ಸ್ಥಳೀಯ ಪತ್ರಿಕೆಗಳು ತಮ್ಮ ಕಾರ್ಯ ನೈಪುಣ್ಯತೆ ಮತ್ತಷ್ಟು ಅಭಿವೃದ್ಧಿಪಡಿಸಲು ಓದುಗರೂ ಸಹ ಚಂದಾದಾರಿಕೆ, ಸ್ವಯಂಪ್ರೇರಿತವಾಗಿ ಜಾಹೀರಾತು ನೀಡಿ ಬೆಂಬಲಿಸಿ, ಇತರರಿಗೂ ಪರಿಚಯಿಸಿ. ಮಕ್ಕಳ ಶೈಕ್ಷಣಿಕ ಪ್ರಗತಿಯೇ ನಮ್ಮ ಧ್ಯೇಯ. ನಿಮ್ಮ ಸಹಕಾರ ಮತ್ತಷ್ಟು ಉತ್ತಮ ಕಾರ್ಯಗಳಿಗೆ ಸ್ಫೂರ್ತಿ. ಸಸಿಗೆ ನೀರೆರೆಯದಿದ್ದರೆ ಹೂವು ನಿರೀಕ್ಷಿಸಲಾಗದು ಹಾಗೆಯೇ ಪತ್ರಿಕೆಗೆ ಬೆಂಬಲವಿಲ್ಲದೆ ಸೇವೆಯ ನಿರಂತರತೆ ಕನಸು ಕಾಣಲಾಗದು! ಪ್ರತಿ ಸುದ್ದಿಯ ಹಿಂದೆ ಯೋಗ್ಯ ಶ್ರಮವಿದೆ. ಪತ್ರಿಕೆ ಕೊಂಡು ಓದಿ, ಆ ಶ್ರಮವನ್ನು ಗೌರವಿಸಿ!

**ಹಂಪಿ ಟೈಮ್ಸ್, ಹೊಸಪೇಟೆ**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**-: ಸಂಪಾದಕರು :-**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

**– ಜಾಹೀರಾತು ವ್ಯವಸ್ಥಾಪಕರು.**

# ನೆಮ್ಮದಿ ಹುಡುಕುತ್ತಾ ಹೊರಟಾಗ...

ಜಗತ್ತಿನ ಸರ್ವ ಶ್ರೇಷ್ಠ ಸಂಪತ್ತು ಎಂದರೆ ನೆಮ್ಮದಿ..... ಪ್ರಪಂಚದಲ್ಲಿ ಖರೀದಿಸುವ ವಸ್ತುಗಳಿಗಿಂತ ವಿಭಿನ್ನ ನೆಮ್ಮದಿ... ಸ್ನೇಹಿತರೆ ಪ್ರಪಂಚದಲ್ಲಿ ಎಲ್ಲಾ ವರ್ಗದ ಜನರು ದಿನನಿತ್ಯ ಹೆಚ್ಚಾಗಿ ಬಳಸುವ ಪದವೆಂದರೆ ನೆಮ್ಮದಿ

ನಾವು ಪ್ರತಿನಿತ್ಯ ಎಲ್ಲರ ಹತ್ತಿರ ಕೇಳುವ ಸಾಲು ಎಂದರೆ ನನ್ನ ಜೀವನದಲ್ಲಿ ಎಲ್ಲಾ ಇದೆ ಆದರೆ ನೆಮ್ಮದಿ ಇಲ್ಲ ಅಂತ. ಈ ನೆಮ್ಮದಿ ಮನುಷ್ಯನ ಜೀವನದಲ್ಲಿ ಬೆಲೆ ಕಟ್ಟಲಾಗದ ವಸ್ತುವಾಗಿದೆ. "ನೆಮ್ಮದಿಯುಳ್ಳ ಜೀವನ ಶ್ರೀಮಂತಿಕೆಯ ಬದುಕಿಗಿಂತ, ಸರ್ವಕಾಲಕ್ಕೂ ಶ್ರೇಷ್ಠ "ಎಂದು ಹಿರಿಯರು ಹೇಳುತ್ತಾರೆ. ಪ್ರಪಂಚದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯು ತನ್ನ ಜೀವಿತಾವಧಿಯಲ್ಲಿ ಹುಡುಕುವುದು...ಹೋರಾಡುವುದು...ಬದುಕುವುದು...

ಈ ನೆಮ್ಮದಿಕ್ಕೋಸ್ಕರ... ಪ್ರತಿಯೊಬ್ಬ ವ್ಯಕ್ತಿಯು ಈ ನೆಮ್ಮದಿಕ್ಕೋಸ್ಕರ ತನ್ನ ಹುಟ್ಟಿನಿಂದ ಸಾಯುವವರೆಗೂ ಹೋರಾಡುತ್ತಲೇ ಇರುತ್ತಾನೆ. ಆದರೆ ನೆಮ್ಮದಿ ಯಾರಿಗೂ ಸಿಗುತ್ತಿಲ್ಲ. ಹಾಗಾದರೆ ಸ್ನೇಹಿತರೇ...ಈ ನೆಮ್ಮದಿ ಎಲ್ಲಿ ಸಿಗುತ್ತದೆ...? ಎಂಬುದು ಯಕ್ಷ ಪ್ರಶ್ನೆಯಾಗಿ ಉಳಿದಿದೆ ಅಲ್ಲವೇ ಹಾಗಾದರೆ ಬನ್ನಿ ನೋಡೋಣ .....

ಅಯ್ಯೋ.....! ದೇವರೇ ಎಲ್ಲಿ ಹುಡುಕಲಿ ನೆಮ್ಮದಿಯನ್ನು, ಭೂಮಿಯಲ್ಲೋ.. ಆಕಾಶದಲ್ಲೋ.. ದೇವಲೋಕದಲ್ಲೋ.. ಇಲ್ಲ ನನ್ನಲ್ಲೂ.. ನಿನ್ನಲ್ಲೂ...ಗೊತ್ತಿಲ್ಲ ಹುಡುಕಿ ಹುಡುಕಿ ಸಿಗದೇ ಸುಸ್ತಾಗಿ ಹೋಗಿದೆ ಆದರೂ ಸಿಗಲಿಲ್ಲ... ನೆಮ್ಮದಿ ಎಂದರೆ ಸಂತೋಷ, ಆನಂದ, ನಮ್ಮೊಳಗೆ ಇದೆ ಎಂಬುದು ಬಲ್ಲವರ ಮಾತು. ಆದರೆ ನಾನು ನನ್ನೊಳಗೆ ಹೊಕ್ಕು ಹುಡುಕಿದೆ ಅದು ಎಲ್ಲಿದೆ ಎಂದು ಸಿಗದೇ ಸುಮ್ಮನಾಗಿ ಬಿಟ್ಟೆ. ಸ್ನೇಹಿತರೆ ನೀವೇನಾದರೂ ಹುಡುಕುವ ಪ್ರಯತ್ನ ಪಟ್ಟಿದ್ದೀರ...? ನಿಮಗೆ ಸಿಕ್ಕಿದಿಯಾ...? ಯಾರನ್ನು ಕೇಳಿದರು ಒಂದೇ ಉತ್ತರ ಇಲ್ಲ.. ಇಲ್ಲ... ಬಹುಶಃ ರೊಕ್ಕ ಕೊಟ್ಟರೆ ಅಂಗಡಿಯಲ್ಲಿ ಸಿಗಬಹುದೇನೋ ಅಂತ ಅಲ್ಲಿಯೂ ಕೇಳಿದೆ. ಅವರು ಹುಚ್ಚ ಎಂದು ಬೈದರು ಸುಮ್ಮನಾದೆ.

ಆದರೂ ಮನಸ್ಸಿಗೆ ಸಮಾಧಾನವಾಗಲಿಲ್ಲ ಹೀಗೆ ತಿಳಿದವರನ್ನು, ಬುದ್ಧಿವಂತರನ್ನು ಕೇಳುತ್ತಾ ಹೋದೆ. ಆಗ ಅವರು ನಿನಗೆ ನೆಮ್ಮದಿ ಬೇಕಾ ದೇವಸ್ಥಾನಕ್ಕೆ ಹೋಗು ಪುಣ್ಯಕ್ಷೇತ್ರಗಳನ್ನ ದರ್ಶನ ಮಾಡು ಅಂದರು. ಅಲ್ಲಿಗೂ ಹೋಗಿ ಬಂದೆ ಒಂದು ಎರಡು ದಿನ ಆರಾಮಾಗಿದ್ದೆ. ಮತ್ತೆ ಮೂರನೇ ದಿನ ಯಥಾ ಪ್ರಕಾರ ಮನಸ್ಸಿಗೆ ಏನೋ ಒಂದು ಯೋಚನೆ ಮತ್ತೆ ಬೇರೆಯವರ ಹತ್ತಿರ ಈ ವಿಷಯವನ್ನು ಚರ್ಚೆ ಮಾಡಿದೆ. ಅವರು ಧ್ಯಾನ ಮಾಡು, ಏಕಾಂಗಿಯಾಗಿರೋ. ಇನ್ನು ಕೆಲವರು ನಿನಗೆ ನೆಮ್ಮದಿ ಬೇಕೆಂದರೆ ಕೆಲಸಕ್ಕೆ ಬಾರದ ಮಾತುಗಳು, ಕೆಲಸಕ್ಕೆ ಬಾರದ ವಸ್ತುಗಳು, ಕೆಲಸಕ್ಕೆ ಬಾರದ ಜನಗಳಿಂದ ಆದಷ್ಟು ದೂರವಿರು ನೆಮ್ಮದಿ ತಾನಾಗಿಯೇ ಬರುತ್ತದೆ ಎಂದರು. ಹಾಗೂ ಮಾಡಿ ನೋಡಿದೆ, ಅದು ಸಹ ಒಂದೆರಡು ದಿನದ ನೆಮ್ಮದಿಯಾಯಿತು ಮತ್ತು ಮೂರನೇಯ ದಿನ ಅದೇ ಯೋಚನೆ ಪ್ರಾರಂಭವಾಯಿತು. ಹೀಗೆ ಸನ್ಯಾಸಿಗಳ ಹತ್ತಿರ ಚರ್ಚೆ ಮಾಡಿದಾಗ ನೀನು ನೆಮ್ಮದಿ ಜೀವನಕ್ಕಾಗಿ ಅಹಂಕಾರ ತ್ಯಜಿಸು, ಮಮಕಾರ ತ್ಯಜಿಸು, ಆಸೆಗಳನ್ನು ತ್ಯಜಿಸು, ದೇವರ ಧ್ಯಾನದಲ್ಲಿ ಇರು ಎಂದರು.




ಆಗಲು ಯಾಕೋ ಮನಸ್ಸಿಗೆ ಸಮಾಧಾನವಾಗಲಿಲ್ಲ. ಇನ್ನು ಕೆಲವರು ನೆಮ್ಮದಿ ನಮ್ಮೊಳಗೆ ಇದೆ ಒಂದಿಷ್ಟು ದಿನ ಎಲ್ಲವ ಬಿಟ್ಟು, ಮನ ನೆಮ್ಮದಿಗೆ ಬದುಕಬೇಕು. ಉಳಿದವರು ಉಳಿದಿರುವಷ್ಟು ದಿನ ನಮ್ಮದೇ ಪ್ರಪಂಚದಲ್ಲಿ ಇರಬೇಕು ಅಂದರು. ಹಾಗೂ ಮಾಡಿದೆ ಆದರೂ ಸ್ವಲ್ಪ ದಿನದ ನಂತರ ಮತ್ತು ಏನೋ ಒಂದು ಯೋಚನೆ...?

ಮನಸ್ಸಿಗೆ ಯಾವಾಗಲೂ ತಳಮಳವೇಕೆ..? ಒಂದು ಕಡೆ ಕುಳಿತರೆ ಸಮಾಧಾನವಿದೆಯೇ ಇಲ್ಲ. ಯಾವ ಕೆಲಸ ಮಾಡಿದರು ಸಂತೋಷವಿಲ್ಲ. ಅನೇಕ ಜನಗಳ ಮಧ್ಯವಿದ್ದರೂ ತೃಪ್ತಿ ಇಲ್ಲ. ಏನೋ ಒಂದು ಬೇಸರ. ಏನೂ ಹಳಹಳಿ ಮನೆಯಲ್ಲಿ ಯಾರನ್ನು ಕಂಡರೂ ಸಿಡಿಮಿಡಿ ಊಟದಲ್ಲಿ ಆಸಕ್ತಿ ಇಲ್ಲ. ಸಮಾರಂಭದಲ್ಲಿ ಖುಷಿ ಇಲ್ಲ. ಸುಮ್ಮನೆ ಕುಳಿತರು ಹೊತ್ತು ಹೋಗದು. ಮನಸ್ಸಿನ ವ್ಯಾಪಾರವೇ ಒಂದು ರೀತಿ ವಿಚಿತ್ರ, ಕೆಲವರನ್ನ ಅಂತೂ ನೋಡಿದರೆ ಯಾವಾಗಲೂ ಯೋಚಿಸುತ್ತಿರುವಂತೆ ಕಾಣುತ್ತಾರೆ. ನಮ್ಮಲ್ಲಿ ಬಹುತೇಕರು ನೆಮ್ಮದಿ ಇಲ್ಲ ಮನ ಶಾಂತಿ ಇಲ್ಲ ಎಂದು ಕೊರಗುತ್ತಾರೆ.



ಇವರೆಲ್ಲರಿಗೂ ನೆಮ್ಮದಿ ಎಂಬುದು ಅಂಗಡಿಯಲ್ಲಿ ದುಡ್ಡಿಗೆ ಸಿಗುವ ವಸ್ತುವಾಗಿದ್ದರೆ, ಇಂದು ಅಂಗಡಿಗಳ ಮುಂದೆ ಸರದಿ ಸಾಲಿನಲ್ಲಿ ನಿಂತು ಎಷ್ಟು ದುಡ್ಡು ಕೊಟ್ಟಾದರೂ, ಎಷ್ಟು ಕಷ್ಟ ಪಟ್ಟಾದರೂ, ಪಡೆಯುತ್ತಿದ್ದರು. ಆಗೇನಾದರೂ ಸಿಕ್ಕಿದ್ದರೆ ಅವರು ಸಂತೃಪ್ತಿ ಇಂದ ಇರುತ್ತಿದ್ದರೇನು ಗೊತ್ತಿಲ್ಲ. ಒಂದು ಸರಿ ಯೋಚಿಸಿದರೆ ನೆಮ್ಮದಿ ಇಲ್ಲದ ಜೀವನ ತುಂಬಾ ಘೋರ ಅನಿಸುತ್ತದೆ . ಅಲ್ಲವೇ...?

"ಯಾವಾಗ ನಿನ್ನ ಅತಿಯಾದ ನಿರೀಕ್ಷೆಗಳು ಅಂತ್ಯವಾಗುತ್ತದೆಯೋ ಅಲ್ಲಿಂದ ನಿನ್ನ ನೆಮ್ಮದಿ ಆರಂಭವಾಗುತ್ತದೆ" ಈ ಒಂದು ವಾಕ್ಯ ಯಾಕೋ ಮನಸ್ಸಿಗೆ ನಾಟಿತು. ನಮಗೆ ಯಾವಾಗ ನಿರೀಕ್ಷೆಗಳು ಅಂದರೆ ಆಸೆ ದುರಾಸೆಗಳು ಅಂತ್ಯವಾಗುತ್ತದೆ. ಈ ಪ್ರಪಂಚದಲ್ಲಿ ಮನುಷ್ಯನಾಗಿ ಹುಟ್ಟಿದ ಮೇಲೆ ಮನುಷ್ಯನಿಗೆ ಹುಟ್ಟಿನಿಂದ ಹಿಡಿದು ಸಾಯುವವರೆಗೂ ಈ ನಿರೀಕ್ಷೆಗಳು ಸಾಯುವುದಿಲ್ಲ. ಪ್ರಪಂಚದ ಎಲ್ಲಾ ವರ್ಗದ ಜನರು ತಮ್ಮ ಜೀವನದಲ್ಲಿ ಪ್ರತಿಕ್ಷಣ ಏನನ್ನಾದರು ಒಂದು ನಿರೀಕ್ಷೆಯಲ್ಲಿ ಜೀವನವನ್ನು ಸಾಗಿಸುತ್ತಿರುತ್ತಾರೆ. ಬಾಲ್ಯಾವಸ್ಥೆಯಲ್ಲಿ ಒಂದು ತರ ನಿರೀಕ್ಷೆ, ಯವ್ವನಾವಸ್ಥೆಯಲ್ಲಿ ಒಂದು ತರ ನಿರೀಕ್ಷೆ, ಮಧ್ಯಾವಸ್ಥೆಯಲ್ಲಿ ಒಂದು ತರ ನಿರೀಕ್ಷೆ ಕೊನೆಗೆ ಮುಪ್ಪಿನ ಕಾಲದಲ್ಲಿಯೂ ಸಹ ಸಾವಿನ ನಿರೀಕ್ಷೆಯನ್ನು ಮಾಡುತ್ತಲೇ ಇರುತ್ತೇವೆ ಇಂತಹ ನಿರೀಕ್ಷೆಯ ಜೀವನದಲ್ಲಿ ನೆಮ್ಮದಿ ಎನ್ನುವುದು ಎಲ್ಲಿ ಬರಬಹುದು ಅಲ್ಲವೇ....?

ಮೂರು ಹೊತ್ತು ಊಟ ಇಲ್ಲದಿದ್ದರೂ ಜೀವನ ನಡೆಯುತ್ತದೆ. ಕೋಟಿ ಕೋಟಿ ಆಸ್ತಿ ಇಲ್ಲದಿದ್ದರೂ ಜೀವನ ನಡೆಯುತ್ತದೆ. ಬಂಗಲೇ ಬಂಗಾರ ಇಲ್ಲದಿದ್ದರೂ ಜೀವನ ನಡೆಯುತ್ತದೆ. ಆದರೆ ಮನಸ್ಸಿಗೆ ನೆಮ್ಮದಿ ಇಲ್ಲದಿದ್ದರೆ ಜೀವನ ನಡೆಯುವುದಿಲ್ಲ. ಹೌದು ಪ್ರತಿಯೊಂದು ಜೀವಿಗೂ ಏನು ಇಲ್ಲದಿದ್ದರೂ ಅನುಸರಿಸಿಕೊಂಡು ಜೀವನ ಸಾಗಿಸುತ್ತವೆ ಆದರೆ ಈ ನೆಮ್ಮದಿ ಎನ್ನುವ ವಸ್ತು ಇಲ್ಲದಿದ್ದರೆ ಜೀವನ ಸಾಗಿಸುವುದು ತುಂಬಾ ಕಷ್ಟ. ಮನುಷ್ಯನಿಗೆ ಈ ನೆಮ್ಮದಿ ಎನ್ನುವ ವಸ್ತು ಸಿಕ್ಕರೆ ಪ್ರಪಂಚ ಬಹಳ ಸುಂದರವಾಗಿರುತ್ತಿತ್ತು. ಈ ನೆಮ್ಮದಿಗೋಸ್ಕರ ದಿನನಿತ್ಯ ಜಗಳ, ಹೊಡೆದಾಟ, ಅಸೂಯೆ, ಯುದ್ಧಗಳು ಹೀಗೆ ಅನೇಕ ರೀತಿಯ ಅಹಿತಕರ ಘಟನೆಗಳು ನಡೆಯುತ್ತಾ ಇರಲಿಲ್ಲ. ಈ ಪ್ರಪಂಚ ಯಾವಾಗ ಹುಟ್ಟಿತೊ ಅದರ ಜೊತೆ ಈ ನೆಮ್ಮದಿಯು ಸಹ ಹುಟ್ಟಿದೆ. ಭವಿಷ್ಯ ಪ್ರಪಂಚ ಹುಟ್ಟಿರುವುದು ಈ ನೆಮ್ಮದಿ ಹುಡುಕಲಿಕ್ಕೆ ಅನಿಸುತ್ತದೆ.

ನೆಮ್ಮದಿ ಇಲ್ಲದ ಜೀವನ ಮರಣಕ್ಕಿಂತ ಹೆಚ್ಚಾಗಿ ನೋವನ್ನು ಕೊಡುತ್ತದೆ. ಮರಣ ಬಂದರೆ ಒಂದೇ ಸಾರಿ ಸಾಯುತ್ತೇವೆ. ಆದರೆ ನೆಮ್ಮದಿ ಇಲ್ಲ ಅಂದರೆ ಪ್ರತಿ ಕ್ಷಣ ಸಾಯುತ್ತಿರುತ್ತೇವೆ. ಬದುಕ ಪಯಣದಲ್ಲಿ ನೆಮ್ಮದಿ ಸಂತೋಷ ಕಾಣಲು ಸಾಧ್ಯವಿಲ್ಲ. ಆದರೆ ಈ ನೆಮ್ಮದಿ ಸಂತೋಷವನ್ನು ಎನ್ನುವ ಮರಿಚಿಕೆ ಅನುಸರಿಸುತ್ತಾ ಬಾಳಿಡಿ ಕಳೆದುಬಿಡುತ್ತೇವೆ. ಇನ್ನೇನು ನೆಮ್ಮದಿ ಕಾಣುವೆ ಎಂದಾಗ ವಾಸ್ತವತೆ ಗಹಕಹಿಸಿ ನಕ್ಕು ಬಿಡುತ್ತದೆ. ಸಂತೋಷ ದಲೆಗಳ ಮರ್ಮರ ಮೂಕವಾಗಿ ಬಿಟ್ಟಿರುತ್ತದೆ. ಜೀವನವಿಡೀ ನೆಮ್ಮದಿ ಸಂತೋಷವೇನ್ನುವ ಕಣ್ಣ ಮುಚ್ಚಾಲೆ ಹಾಡುತ್ತಾ.. ಕೊನೆಗೆ ಸಾವು ಎನ್ನುವ ಹಂತಕ್ಕೆ ಬಂದು, ನಾವೆಲ್ಲರೂ ಶಾಶ್ವತವಾದ ನೆಮ್ಮದಿಯನ್ನು ರುದ್ರ ಭೂಮಿ ಅಥವಾ ಸ್ಮಶಾನದಲ್ಲಿ ಕಾಣುತ್ತೇವೆ ಅಲ್ಲವೇ.....! ಸ್ನೇಹಿತರೆ.?

# ಅಳಿವಿನಂಚಿನ ಜೀವಂತಿ ಹಾಲೆಸೊಪ್ಪನು ಅರಸುತ್ತಾ...

ಹೊಟ್ಟೆಗಿಲ್ಲುದ್ ಕಾಲ್ದಾಗ ಬಡವರ ಪಾಲಿಗೆ ಸಂಜೀವಿನಿಯಾಗಿತ್ತು ಈ ಸೊಪ್ಪು....ಯಾರ್ ತಿಂದ್ರು ಏನೂ ತೊಂದ್ರೆ ಕೊಡಲಾರದ ಗುಣ ಈ ಸೊಪ್ಪಿಗಿದೆ ..." ಅಂತ ಅಮ್ಮ ಹೇಳುತ್ತಿರುವಾಗ ಈ ಸೊಪ್ಪಿನ ಬಗೆಗೆ ಮತ್ತಷ್ಟು ತಿಳಿದುಕೊಳ್ಳುವ ಕುತೂಹಲ ಜಾಸ್ತಿಯಾಯಿತು.



ಹಾಗಾದ್ರೆ ಈ ಸೊಪ್ಪು ಈಗ ಎಲ್ಲಿ ಸಿಗುತ್ತೆ ಅಮ್ಮ? ಅಂತ ಕೇಳಿದ ಪ್ರಶ್ನೆಗೆ.... ನಮ್ಮ ಹೊಲದ ( ನಮ್ಮ ಹೊಲ ಇರುವುದು ವಿಜಯನಗರ ಜಿಲ್ಲೆ ಕೂಡ್ಲಿಗಿ ತಾಲೂಕಿನ ಗೆದ್ದಲಗಟ್ಟೆಯಲ್ಲಿ ) ಬದುವಿನಲ್ಲಿರುವ ತುಗ್ಗಲಿ ಗಿಡದಲ್ಲಿ ಅಪರೂಪದ ಹಾಲೇ ಸೊಪ್ಪು ಕಂಡ್ರೂ ಕಾಣದಂತೆ ಐತೆ ನಿನಗೆ ತೋರಿಸ್ತೀನಿ ಬಾ"ಅಂತ ಕರ್ಕೊಂಡು ಹೊಂಟ್ರು.

ಅಂದು ಶನಿವಾರದ ಶಾಲೆ ಮುಗಿಸಿಕೊಂಡು ಸೀದಾ ಹೊಲದ ಕಡೆ ನಡೆದು ಹೊರಟ ಅಮ್ಮ ಮತ್ತು ನಾನು "ಆ ತುಗ್ಗಲಿಗಿಡದಲ್ಲಿ ಅಡಗಿ ಕುಳಿತಿದ್ದ ಬಳ್ಳಿಯೊಳಗೆ ಅಲ್ಲೊಂದು ಇಲ್ಲೊಂದು ಎಲೆಗಳನ್ನು ಬಿಟ್ಟು ನಳನಳಿಸುತ್ತಾ ಕಂಗಳಿಗೆ ಬಿತ್ತು ಅಪರೂಪದ ಹಾಲೇಸೊಪ್ಪು"....

ಆ ಹಾಲೆ ಸೊಪ್ಪನ್ನು ನೋಡಿದಾಕ್ಷಣವೇ ಅಮ್ಮ ಒಂದೆರಡು ಎಲೆಗಳನ್ನು ತಿನ್ನಲು ಕೊಟ್ಟರು. ಹಸಿಯಾಗಿ ತಿಂದ್ರೆ ಬಾರೀ ಒಳ್ಳೆದು, ಹೊಟ್ಟೆಯಾಗಿರೋ ರೋಗ ಓಡಿಸೋ ಶಕ್ತಿ ಇದುಕ್ಕ ಐತಿ" ಅಂದ್ರು. ಒಂದೆರಡು ಸೊಪ್ಪಿನ ಎಲೆಗಳನ್ನು ತಿಂದಾಗ, "ಬಾಯಿಗೆ ರುಚಿಯು ಉದರಕ್ಕೆ ಆನಂದವೂ" ಆದಂತಾಯಿತು. ತಕ್ಷಣವೇ ನೆನಪಿಗೆ ಇರಲಿ ಅಂತ ನಾಲ್ಕಾರು ಫೋಟೋಗಳನ್ನು ನಾನು ತೆಗೆದುಕೊಂಡೆ. ಮಾತು ಮುಂದುವರಿಸಿದ ಅಮ್ಮ "ನೋಡ್ ತಮ್ಮ ನಾವು ಈ "ಹಾಲೆಸೊಪ್ಪಿನ ಉದುಕ", ಬಿರುಸಾದ ಎರಡು ಮುದ್ದೆ ತಿಂದು, ಹೊಲಕ್ಕೆ ಹೋದರೆ ಹೊಟ್ಟೆನೇ ಹಸಿತಿರ್ಲಿಲ್ಲ" ಅಂದ್ರು.

**ನೆಗಡಿ ನಿವಾರಕ...**

ತೀವ್ರ ನೆಗಡಿಯಾದ ಸಂದರ್ಭದಲ್ಲಿ ಹಾಲೆ ಸೊಪ್ಪಿನ ಕುಡಿಯನ್ನು ಮೂಗಿನಲ್ಲಿ ಏರಿಸಿಕೊಂಡರೆ,'ಸೀನಿನ ಮೇಲೆ ಸೀನುಗಳು' ಬಂದು ನೆಗಡಿ ಒಂದೆರಡು ದಿನಗಳಲ್ಲಿ ವಾಸಿಯಾಗುತ್ತಿತ್ತು ಎಂದು ತಿಳಿಸಿದರು...

ಈ ಸೊಪ್ಪಿನ ಬಗ್ಗೆ ಅಮ್ಮನಿಂದ ಇಷ್ಟೆಲ್ಲ ಮಾಹಿತಿ ತಿಳಿದ ಮೇಲೆ... ಮತ್ತಷ್ಟು ಮಾಹಿತಿಯನ್ನು ತಿಳಿಯಬೇಕೆನಿಸಿದಾಗ ಬೇರೆ ಬೇರೆ ಮೂಲಗಳನ್ನು ಕೆದಕಿದಾಗ ಸಿಕ್ಕ ಮಾಹಿತಿ ಎಂದರೆ....



ಇದನ್ನು ಸಂಸ್ಕೃತದಲ್ಲಿ 'ಜೀವಂತಿ' ಎಂದು ಕರೆಯುತ್ತಾರೆ. ಇದು 'ತ್ರಿದೋಷ ಶಮನಕಾರಿಯಾಗಿದೆ'. ಯಾವುದೇ ದೋಷದಿಂದ ಬಂದ ಕೆಮ್ಮು, ಅಸ್ತಮಾ ವಾಸಿ ಮಾಡುವ ಮತ್ತು ಹೃದಯ ದೌರ್ಬಲ್ಯವನ್ನು ಕಡಿಮೆ ಮಾಡಿ, "ಹೃದಯದ ಆರೋಗ್ಯಕ್ಕೆ ಸಂಜೀವಿನಿಯಾಗಿದೆ". ನರಗಳಿಗೆ ಚೈತನ್ಯವನ್ನು ವೃದ್ಧಿ ಮಾಡಿ, "ಸಪ್ತ ಧಾತುಗಳ ವೃದ್ಧಿಕಾರಕವಾಗಿದೆ".

ಜೀವಂತಿಯ ಬಗೆಗಿನ ಸಂಸ್ಕೃತ ಶ್ಲೋಕ ಹೀಗಿದೆ....

**"ಜೀವಂತಿ ಸರ್ವಶಾಖೋತ್ತಮಂ**
**ಖಾಸಾ ಶ್ವಾಸ ಕಫಹರಂ**
**ತ್ರಿದೋಷ ಶಮನ ಕ್ಷಯಹರಂ ರಸಂ ಇನಾ"...**

ಹಾಲೆ ಸೊಪ್ಪಿನ ಬಗೆಗಿನ ಇನ್ನಷ್ಟು ಮಾಹಿತಿ (ವಿವಿಧ ಮೂಲಗಳಿಂದ )

ಕನ್ನಡ ಹೆಸರು : ಜೀವಹಾಲೆ ಬಳ್ಳಿ, ಹಾಲೆಸೊಪ್ಪು,ಪಾಲತಿಗೆ ಬಳ್ಳಿ, ಹಾರಂದೊಡೆ
ಸಂಸ್ಕೃತ ಹೆಸರು : ಜೀವಂತಿ, ಸ್ವರ್ಣಜೀವಂತಿ
ಹಿಂದಿ ಹೆಸರು : ಜೀವಂತಿ, ಡಿದೀಶಾಕ
ಸಸ್ಯಶಾಸ್ತ್ರೀಯ ಹೆಸರು : Leptadenia reticulate

ಹಳ್ಳಿಗಳಲ್ಲಿ ಪೊದೆಗಳ ಮೇಲೆ ಹಬ್ಬಿ ಬೆಳೆಯುವ ಬಳ್ಳಿ ಜೀವಂತಿ. ಇದರ ಬೆಳೆದ ಬಳ್ಳಿಕಾಂಡದ ಬಣ್ಣ ಹಳದಿ ಮಿಶ್ರಿತ ಕಂದು. ಇದರ ಎಲೆಗಳು ಅಂಡ-ಹೃದಯಾಕಾರದವು. ಬಳ್ಳಿಯಲ್ಲಿ ಒಂದಕ್ಕೆದುರಾಗಿ ಇನ್ನೊಂದು ಎಲೆಗಳಿರುತ್ತವೆ. ಇದರ ಹೂಗೊಂಚಲಿನಲ್ಲಿರುವ ಹೂಗಳ ಬಣ್ಣ ಹಸುರು ಮಿಶ್ರಿತ ಹಳದಿ. ಬಳ್ಳಿಕಾಂಡದ ಹಾಲಿನ ಬಣ್ಣ ತಿಳಿಹಳದಿ.

ತಂಪು ಜಾಗದಲ್ಲಿ ಹುಲುಸಾಗಿ ಬೆಳೆಯುವ ಬಳ್ಳಿ ಜೀವಂತಿ. ಇದರ ಎಲೆ, ಕಾಂಡ ಮತ್ತು ಬೇರು ಔಷಧಿಯಾಗಿ ಬಳಕೆ. ಇದರ ಎಲೆ ಮತ್ತು ಕಾಂಡವನ್ನು ಸಣ್ಣದಾಗಿ ತುಂಡು ಮಾಡಿ, ಬೇಯಿಸಿ ಒಗ್ಗರಣೆ ಹಾಕಿದರೆ ಪಲ್ಯ ತಯಾರು. ಹಾಗೆಯೇ ಎಲೆಗಳನ್ನು ಜೀರಿಗೆ ಜೊತೆ ಹುರಿದು, ತೆಂಗಿನಕಾಯಿ ತುರಿ ಸೇರಿಸಿ ರುಬ್ಬಿ, ಮಜ್ಜಿಗೆ ಅಥವಾ ಮೊಸರು ಬೆರೆಸಿದರೆ ಊಟಕ್ಕೆ ರುಚಿಯಾದ ತಂಬುಳಿ ಸಿದ್ಧ. ಇದರ ಎಲೆ ಜಾನುವಾರುಗಳಿಗೆ ಒಳ್ಳೆಯ ಆಹಾರ.

**ಔಷಧೀಯ ಬಳಕೆ :**

ಮೈಯಲ್ಲಿ ಬೊಬ್ಬೆಗಳು ಎದ್ದಾಗ, ಜೀವಂತಿಯ ಬೇರನ್ನು ಅರೆದು ಲೇಪಿಸಿದರೆ ಉರಿ ಮತ್ತು ತುರಿಕೆ ಕಡಿಮೆಯಾಗುತ್ತದೆ.

ಮಲಬದ್ಧತೆ ಗುಣವಾಗಲು ಇದರ ಎಲೆಯ ರಸ ಅಥವಾ ಬೇರಿನ ಕಷಾಯದ ಸೇವನೆ ಉಪಯುಕ್ತ.

ಬಾಣಂತಿಯರಿಗೆ ಎದೆಹಾಲು ಹೆಚ್ಚಾಗಲು ಜೀವಂತಿಯ ಎಲೆಗಳನ್ನು ಆಹಾರವಾಗಿ ಸೇವಿಸುವುದು ಸಹಕಾರಿ.

(ಬಳಸುವ ಮುನ್ನ ಸೂಕ್ತ ವೈದ್ಯರ ಸಲಹೆ ಸೂಚನೆ ಪಡೆದುಕೊಳ್ಳಿ)

**ಉಳಿಸಬೇಕಾದ ತುರ್ತು ಇದೆ...**

ಒಂದು ಕಾಲದಲ್ಲಿ ಆಹಾರವೇ ಆಗಿದ್ದ, ಹೇರಳವಾಗಿ ದೊರೆಯುತ್ತಿದ್ದ ಈ ಸೊಪ್ಪು, ಅತಿಯಾದ ಬಳಕೆ ಮತ್ತು ಪ್ರಾಣಿಗಳ ಮೇಯುವಿಕೆಯಿಂದಾಗಿ ಅಳಿವಿನಂಚಿಗೆ ಬಂದು ತಲುಪಿದೆ.

ಇಂತಹ ಮಹತ್ವದ ಔಷಧೀಯ ಗುಣವುಳ್ಳ ಜೀವಂತಿ ಅಥವಾ ಹಾಲೆಸೊಪ್ಪನ್ನು ಉಳಿಸಿ, ಬೆಳೆಸಬೇಕಾದ ತುರ್ತು ಇದೆ. ಈ ಬಗ್ಗೆ ಕೃಷಿ ವಿಜ್ಞಾನಿಗಳು ಮತ್ತು ಕೃಷಿ ವಿಶ್ವವಿದ್ಯಾಲಯಗಳು ಗಮನಹರಿಸುವುದು ಸೂಕ್ತ. ಈ ಮೂಲಕ ಮತ್ತೆ ಹಾಲೆ ಸೊಪ್ಪು ಹೇರಳವಾಗಿ ದೊರೆಯುವಂತಾಗಲಿ, ಎಲ್ಲರ ಆರೋಗ್ಯ ವೃದ್ಧಿಸುವಂತಾಗಲಿ.

**– ಶೇಖರಯ್ಯ ಟಿ ಎಚ್ ಎಂ ಗೆದ್ದಲಗಟ್ಟೆ. ಕೂಡ್ಲಿಗಿ**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ದಿನಪತ್ರಿಕೆ ಓದು ಮಕ್ಕಳ ಭವಿಷ್ಯಕ್ಕೆ ಸಂಪತ್ತು!

ನಿಮ್ಮ ಮಕ್ಕಳ ಶೈಕ್ಷಣಿಕ ಪ್ರಗತಿಯ ಜತೆ ಶಿಕ್ಷಣದಲ್ಲಿ ಸಾಧಕರಾಗಬೇಕೇ ? ಹಾಗಿದ್ದರೆ, ಪ್ರತಿದಿನ 'ಹಂಪಿ ಟೈಮ್ಸ್' ದಿನಪತ್ರಿಕೆಯನ್ನು ಓದಲು ಪ್ರೋತ್ಸಾಹಿಸಿ!

**ಜ್ಞಾನ ವೃದ್ಧಿ**

ದಿನನಿತ್ಯದ ಪ್ರಪಂಚದ ಅರಿವು, ಪ್ರಚಲಿತ ಘಟನೆಗಳು, ವಿಜ್ಞಾನ, ಕ್ರೀಡೆ, ಕಲೆ ಮತ್ತು ಸಾಂಸ್ಕೃತಿಕ ವಿಷಯಗಳ ಬಗ್ಗೆ ಮಕ್ಕಳು ತಿಳಿದುಕೊಳ್ಳಲು ಇದು ಅತ್ಯುತ್ತಮ ಮಾರ್ಗ.

**ಓದುವ ಹವ್ಯಾಸ**

ಚಿಕ್ಕ ವಯಸ್ಸಿನಿಂದಲೇ ಓದುವ ಆಸಕ್ತಿ ಬೆಳೆಸುವುದರಿಂದ ಅವರ ಭಾಷಾ ಕೌಶಲ್ಯಗಳು, ಶಬ್ದ ಸಂಪತ್ತು ಮತ್ತು ಗ್ರಹಿಕೆ ಸಾಮರ್ಥ್ಯ ಹೆಚ್ಚುತ್ತದೆ.

**ಸಾಮಾನ್ಯ ಜ್ಞಾನ**

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮತ್ತು ಭವಿಷ್ಯದ ಸವಾಲುಗಳಿಗೆ ಅಗತ್ಯವಾದ ಸಾಮಾನ್ಯ ಜ್ಞಾನವನ್ನು ಪತ್ರಿಕೆ ಓದುವ ಮೂಲಕ ಪಡೆಯಬಹುದು.

**ವಿಶ್ಲೇಷಣಾತ್ಮಕ ಚಿಂತನೆ**

ವಿವಿಧ ವಿಷಯಗಳ ಕುರಿತು ಲೇಖನ ಗಳನ್ನು ಓದುವುದರಿಂದ ಮಕ್ಕಳು ವಿಶ್ಲೇಷಣಾತ್ಮ ಕವಾಗಿ ಯೋಚಿಸಲು ಮತ್ತು ತಮ್ಮದೇ ಆದ ಅಭಿಪ್ರಾಯಗಳನ್ನು ರೂಪಿಸಿಕೊಳ್ಳಲು ಕಲಿಯುತ್ತಾರೆ. 'ಹಂಪಿ ಟೈಮ್ಸ್' ದಿನಪತ್ರಿಕೆಯನ್ನು ನಿಮ್ಮ ಮಕ್ಕಳ ದೈನಂದಿನ ಚಟುವಟಿಕೆಯ ಭಾಗವಾಗಿಸಿ, ಅವರಿಗೆ ಜ್ಞಾನದ ಬೃಹತ್ ಸಂಪತ್ತನ್ನು ನೀಡಿರಿ. ಇದು ಅವರ ಶೈಕ್ಷಣಿಕ ಯಶಸ್ಸಿಗೆ ಮತ್ತು ಸ್ವಾಭಿಮಾನ ಬದುಕಿಗೆ ಭದ್ರ ಬುನಾದಿಯಾಗುತ್ತದೆ.

epaper.hampitimes.com

Scan For Digital Colourful
HAMPI TIMES E-paper

ಹಂಪಿ ಟೈಮ್ಸ್ ದಿನಪತ್ರಿಕೆಗಾಗಿ ನಿಮ್ಮ ಸಮೀಪದ ಪತ್ರಿಕೆ ವಿತರಕ/ಏಜೆಂಟರನ್ನು ಸಂಪರ್ಕಿಸಿ 94486 33038

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನ ಪತ್ರಿಕೆ

ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.

Only Admins can Send Messages to this Group
Join with Us

# ಚದುರಂಗದ ಕಾಲಾಳು ಮತ್ತು ನಮ್ಮ ಬದುಕು



ಚದುರಂಗದಾಟದಲ್ಲಿ ರಾಜ, ಮಂತ್ರಿ,ಒಂಟೆ,ಕುದುರೆ, ಆನೆ ಮತ್ತು ಸೈನಿಕ ಅಥವಾ ಕಾಲಾಳು ಎಂದು ಕರೆಯಲ್ಪಡುವ ಕಾಯಿಗಳು ಇರುತ್ತವೆ. ಚದುರಂಗದ ಕಪ್ಪು ಬಿಳಿ ಚೌಕಳಿ ನೆಲಹಾಸಿನ ಪ್ರತಿ ಸಾಲಿಗೂ ಎಂಟರಂತೆ ಒಟ್ಟು ಎಂಟು ಸಾಲುಗಳ 64 ಚೌಕಳಿಗಳಲ್ಲಿ ಒಂದೆಡೆ ಬಿಳಿ ಬಣ್ಣದ ಕಾಯಿಗಳು ಇದ್ದು ಮತ್ತೊಂದೆಡೆ ಕಪ್ಪು ಬಣ್ಣದ ಕಾಯಿಗಳನ್ನು ಜೋಡಿಸಲಾಗುತ್ತದೆ. ಹಿಂದಿನ ಸಾಲಿನ ಮಧ್ಯದಲ್ಲಿ ರಾಜ ಮತ್ತು ಮಂತ್ರಿ ಇದ್ದರೆ ಅವೆರಡರ ಎಡ ಬಲ ಬದಿಗಳಲ್ಲಿ ಒಂಟೆ ಕುದುರೆ ಮತ್ತು ಕೊನೆಯಲ್ಲಿ ಆನೆಯ ಕಾಯಿಗಳನ್ನು ಜೋಡಿಸಲಾಗುತ್ತದೆ. ಮುಂದಿನ ಸಾಲಿನಲ್ಲಿ ಸಾಲಾಗಿ ಎಂಟು ಜನ ಕಾಲಾಳುಗಳನ್ನು ಜೋಡಿಸಲಾಗಿರುತ್ತದೆ.

ಪ್ರತಿಯೊಂದು ಕಾಯಿಯನ್ನು ಕೂಡ ತನ್ನದೇ ಆದ ನಿಗದಿತ ರೀತಿಯಲ್ಲಿ ಚಲಾಯಿಸಬೇಕು. ಪರಸ್ಪರ ಎದುರಾಳಿಗಳು ಒಬ್ಬರ ನಂತರ ಒಬ್ಬರು ತಮ್ಮ ಕಾಯಿಗಳನ್ನು ಚಲಾಯಿಸುತ್ತಾ ಬೇರೊಬ್ಬರ ಕಾಯಿಗಳನ್ನು ಕಡಿದು ಹಾಕುತ್ತಾ ತಮ್ಮ ಕಾಯಿಗಳನ್ನು ಉಳಿಸಿಕೊಳ್ಳುತ್ತಾ ಸಾಗುತ್ತಾರೆ ಅಂತಿಮವಾಗಿ ಅವರ ಗುರಿ ರಾಜನ ಕಾಯಿಯನ್ನು ಉಳಿಸಿಕೊಳ್ಳುವುದು. 'ಚಾಣಾಕ್ಷರ ಆಟ'ಎಂದೇ ಪರಿಗಣಿಸಲ್ಪಡುವ ಚದುರಂಗದಾಟ ಕೆಲವೊಮ್ಮೆ ವೈಪರೀತ್ಯಕ್ಕೂ ಎಡೆ ಮಾಡಿ ಕೊಡುತ್ತದೆ.

ಕಾಲಕಾಲಕ್ಕೆ ಚದುರಂಗದಾಟದ ನಿಯಮಗಳಲ್ಲಿ ಹತ್ತು ಹಲವು ಬದಲಾವಣೆಗಳಾಗಿದ್ದರೂ ಪ್ರತಿಯೊಂದು ಕಾಯಿಯ ನಡೆ ಮಾತ್ರ ಹಾಗೆಯೇ ಉಳಿದುಕೊಂಡು ಬಂದಿರುವುದು ಇಂದಿಗೂ ಜನರು ಸಮಯದ ಸದುಪಯೋಗ ಮಾಡಿಕೊಳ್ಳಲು ಮತಿಯನ್ನು ಚುರುಕುಗೊಳಿಸಲು ಚದುರಂಗದಾಟದ ಮೊರೆ ಹೋಗುತ್ತಾರೆ.

ಇಂತಹ ಚದುರಂಗದಾಟದಲ್ಲಿ ಕಾಲಾಳು ನಗಣ್ಯ ಎಂದು ನಮಗೆ ತೋರಬಹುದು. ಪ್ರತಿ ಬಾರಿಯೂ ಕೇವಲ ಒಂದು ಹೆಜ್ಜೆ ಮಾತ್ರ ಮುನ್ನಡೆಯುವ ಬೇರೊಂದು ಕಾಯಿಯನ್ನು ಕಡಿಯುವಾಗ ಎದುರು ಭಾಗದಲ್ಲಿ ಕವಲೊಡೆದು ಪಕ್ಕದ ಚೌಕಳಿಯ ಮುಂದಿನ ಚೌಕಕ್ಕೆ ಸಾಗುತ್ತದೆ. ನಡೆಯಲು ಸೀಮಿತವಾದ ಅವಕಾಶ ಇರುವ ಕಾಲಾಳಿನ ಮಹತ್ವ ನಮಗೆ ಗೊತ್ತಿಲ್ಲದಿರಬಹುದು... ಕಾಲಾಳಿನ ಮಹತ್ವವನ್ನು ಅದರ ಬಾಯಿಂದಲೇ ಕೇಳೋಣ ಬನ್ನಿ.

ಚದುರಂಗದಾಟದ ಎಲ್ಲ ಘಟಾನುಘಟಿ ಕಾಯಿಗಳ ಮುಂದೆ ನಾನೊಂದು ಪುಟ್ಟ ಕಾಲಾಳು ಮಾತ್ರ, ನಿಜ ಆದರೆ ನನಗೆ ನನ್ನದೇ ಆದ ಘನತೆ ಗೌರವ ಇದೆ. ವ್ಯಕ್ತಿತ್ವವೂ ಇದೆ ಎಂಬುದು ನಿಮಗೂ ಗೊತ್ತಿರಲಿ ಎಂದೇ ನನ್ನ ಕುರಿತು ನಿಮಗೆ ವಿಷಯಗಳನ್ನು ಪರಿಚಯಿಸಿ ಕೊಡುತ್ತೇನೆ.

"ಮೂರ್ತಿ ಚಿಕ್ಕದಾದರೂ, ಕೀರ್ತಿ ದೊಡ್ಡದು" ಎಂಬಂತಹ ಘನತೆ ನನ್ನ ಪುಟ್ಟ ದೇಹಕ್ಕೆ ಇದೆ. ನಾನು ರಾಜನಂತೆ ಕಾಲನ್ನು ಸರಿಸಿ ನಡೆಯುವುದಿಲ್ಲ ಮತ್ತು ಮಂತ್ರಿಯಂತೆ ಛಂಗನೆ ಹಾರುವುದಿಲ್ಲ. ನಾನು ಯಾರನ್ನೂ ಆಳುವುದಿಲ್ಲ ಮತ್ತು ಯಾರಿಗೂ ಆಜ್ಞೆಗಳನ್ನು ನೀಡುವುದಿಲ್ಲ. ನಾನು ಸದಾ ಒಂದೊಂದೇ ಹೆಜ್ಜೆಗಳನ್ನು ಮುಂದಿಟ್ಟು ನಡೆಯುತ್ತೇನೆ.... ನನ್ನದು ಯಾವಾಗಲೂ ಮುಂದಿನ ದಾರಿ ಹಿಮ್ಮುರಿ ಪಯಣವಲ್ಲ.... ಆಸೆ ಆಮಿಷಗಳನ್ನು ಕಟ್ಟಿಟ್ಟು ಕರ್ತವ್ಯ ಪರತೆಯನ್ನು ಆಯ್ಕೆ ಮಾಡಿಕೊಂಡಿರುವುದರ ಸಂಕೇತ ನಾನು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ನಾನೆಂದೂ ಹಿಮ್ಮುಖವಾಗಿ ನಡೆಯುವುದಿಲ್ಲ... ಅಂತೆಯೇ ನಾನು ನನ್ನ ಭೂತದೆಡೆ ತಿರುಗಿ ನೋಡುವುದಿಲ್ಲ. ನನ್ನ ಸ್ಥಾನಕ್ಕೆ ವಿರುದ್ಧವಾಗಿ ನಾನು ಏನನ್ನೂ ಮಾಡುವುದಿಲ್ಲ. ತುಂಬು ಘನತೆಯಿಂದ ನನ್ನ ಕರ್ತವ್ಯವನ್ನು ನಾನು ಒಪ್ಪಿಕೊಂಡು ನಿರ್ವಹಿಸುತ್ತೇನೆ

ಇದು ನನಗೆ ನೀಡಲಾಗಿರುವ ಕರ್ತವ್ಯಕ್ಕೆ ನಾನು ಬದ್ಧ ಎಂಬುದನ್ನು ತೋರಿಸುತ್ತದೆ. ನನ್ನಲ್ಲಿರುವ ಹುಮ್ಮಸ್ಸನ್ನು ಯಾರಿಂದಲೂ ಅಲುಗಿಸಲಾಗದು. ನನ್ನ ಪ್ರತಿಯೊಂದು ಮುಂದಿನ ಹೆಜ್ಜೆಯು ನನ್ನ ಧೈರ್ಯ, ಸಾಹಸಗಳ ಪ್ರತೀಕವಾಗಿದೆ. ಅಪಾಯಕ್ಕೆ ನಾನೆಂದೂ ಹಿಂದಡಿ ಇಡುವುದಿಲ್ಲ ಎಂಬುದರ ಸಂಕೇತವಾಗಿದೆ.

ನನ್ನ ಶತ್ರುಗಳನ್ನು ನಾನೆಂದೂ ವಿರೋಧಿಸುವುದಿಲ್ಲ ಆದರೆ ತ್ಯಾಗ ಮಾಡುವ ಭಯ ಕೂಡ ನನಗಿಲ್ಲ ನನ್ನನ್ನು ಆಹುತಿ ಪಡೆಯಬಹುದು, ರಂಗದಿಂದ ಮುರಿದು ಹೊರಗಟ್ಟಬಹುದು ಎಂಬ ಭಯ ನನಗಿಲ್ಲ ಎಂದಲ್ಲವಾದರೂ ಕೂಡ ನಾನು ನಿಶ್ಚಲವಾಗಿ ನನ್ನ ಕೆಲಸದಲ್ಲಿ ಮುಂದುವರೆಯುತ್ತೇನೆ, ಯಾಕೆಂದರೆ ಹಾಗೆ ಮುಂದುವರಿಯುವ ಮೂಲಕ ನಾನು ನನ್ನ ಅಂತಿಮ ರೇಖೆಯನ್ನು ಮುಟ್ಟಿದರೆ ನನ್ನಲ್ಲಿ ಬಲು ದೊಡ್ಡ ಬದಲಾವಣೆಯನ್ನು ನೀವು ಕಾಣಬಹುದು. ಹಾಗೆ ಅಂತಿಮ ಗುರಿಯನ್ನು ಮುಟ್ಟುವಲ್ಲಿ ನನಗೆ ಯಾವುದೇ ರೀತಿಯ ದುರಾಸೆ ಇಲ್ಲವಾದರೂ ಗೌರವವಿದೆ, ಕಾರಣ ಹಾಗೆ ನೇರವಾಗಿ ಯುದ್ಧ ರಂಗದಲ್ಲಿ ಮುನ್ನಡೆಯುವ ಮೂಲಕ ನಾನು ಜೀವನದ ಸಾರವನ್ನು ಹೀರುತ್ತಾ ಮತ್ತೆ ಉದಯಿಸುವ ಸೂರ್ಯನ ರೀತಿ ಮರಳುವ ಹಕ್ಕನ್ನು ಹೊಂದಿರುತ್ತೇನೆ. ಜೀವನದಲ್ಲಿ ನಿಜವಾದ ಮುಂದುವರೆಯುವಿಕೆಯನ್ನು ಎಂದಿಗೂ ಹೇರುವಿಕೆಯ ಮೂಲಕ ಸಾಧಿಸಲಾಗದು ಬದಲಾಗಿ ನಿರಂತರ ಪ್ರಯತ್ನ ಮತ್ತು ಮುಂದುವರಿಯುವಿಕೆಯ ಮೂಲಕ ಗಳಿಸಬಹುದು ಎಂಬುದನ್ನು ನನ್ನ ಬದುಕಿನ ಮೂಲಕ ನೀವು ಅರಿಯಬಹುದು.

ಈ ಜಗತ್ತಿನಲ್ಲಿ ಪ್ರತಿಯೊಂದು ಪುಟ್ಟ ಕ್ಷುದ್ರ ಜೀವಿಗೂ ಒಂದು ಬದುಕಿದೆ. ಆ ಬದುಕನ್ನು ಹೇಗೆ ನಡೆಸುತ್ತೇವೆ ಎಂಬುದು ನಮಗೆ ಬಿಟ್ಟದ್ದು. ಅಂತಿಮವಾಗಿ ನಾನು ನಿಮಗೆ ಹೇಳುವುದೇನೆಂದರೆ ನೀವೆಲ್ಲರೂ ಬಂದಿರುವುದು ಒಂದೇ ಮೂಲದಿಂದ. ನಿಮ್ಮೆಲ್ಲರನ್ನು ಈ ಚದುರಂಗದಾಟದ ದಾಳಗಳಾಗಿ ಆ ದೇವರು ಆಡಿಸುತ್ತಾನೆ ಆಟ ಮುಗಿದ ಮೇಲೆ ಎಲ್ಲ ಕಾಯಿಗಳು ಒಂದೇ ಡಬ್ಬಿಯಲ್ಲಿ ಸೇರುವಂತೆ ನೀವುಗಳು ಕೂಡ

ಆ ಭಗವಂತನ ಸನ್ನಿಧಾನವನ್ನು ಸೇರುತ್ತೀರಿ. ಅಲ್ಲಿ ರಾಜನಾಗಿರಲಿ ಪ್ರಜೆಯಾಗಿರಲಿ ಎಲ್ಲರೂ ಒಂದೇ.

ಇರುವಷ್ಟು ಕಾಲವು ಎಲ್ಲರೊಂದಿಗೆ ಪ್ರೀತಿ,ವಿಶ್ವಾಸ, ಶಾಂತಿ, ನೆಮ್ಮದಿ ಮತ್ತು ತಾಳ್ಮೆಯಿಂದ ಸಾಮರಸ್ಯದ ಬದುಕನ್ನು ಸಾಗಿಸುವ ಮೂಲಕ ನಿಮ್ಮ ಬದುಕನ್ನು ಸಾರ್ಥಕ ಪಡಿಸಿಕೊಳ್ಳಿ... ಇಂತಿ ನಿಮ್ಮ ಚದುರಂಗದ ಕಾಯಿ.

ಎಂದು ಬದುಕಿನ ಬಹು ದೊಡ್ಡ ಪಾಠವನ್ನು ಚದುರಂಗದ ಕಾಯಿ ನಮಗೆ ತನ್ನ ಆತ್ಮ ವಿಮರ್ಶೆಯನ್ನು ಮಾಡಿಕೊಳ್ಳುವ ಮೂಲಕ ಹೇಳುತ್ತದೆ. ಖಂಡಿತವಾಗಿಯೂ ಚದುರಂಗದ ಕಾಯಿಯ ಈ ಮಾತುಗಳನ್ನು ನಾವು ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಸಾರ್ಥಕ ಬದುಕನ್ನು ನಡೆಸೋಣ.... ಏನಂತೀರಾ?

# ಭಾರತ ಪ್ರಥಮ ಹಾಲು ಉತ್ಪಾದಕರ ರಾಷ್ಟ್ರ

ಹಾಲು ಅಮೃತಕ್ಕೆ ಸಮಾನ' ಎಂಬ ಮಾತಿದೆ. ಹಾಲು ಸಂಪೂರ್ಣ ಆಹಾರ ಎಂಬ ಗರಿಮೆಯನ್ನು ಪಡೆದಿದೆ. ಇಂತಹ ಹಾಲು ಮಾನವ ಜನಾಂಗಕ್ಕೆ ಅಗತ್ಯವಾದ ಪ್ರೋಟೀನ್ ಕ್ಯಾಲ್ಸಿಯಂ ಒದಗಿಸುವ ಆಹಾರದ ಮೂಲ ವಾಗಿ ಪ್ರಮುಖ ಪಾತ್ರ ವಹಿಸುತ್ತದೆ.



ದಿನ ಬೆಳಗಾದರೆ ಕಾಫಿ, ಟೀ ಮಾಡಲು, ಸಿಹಿ ಪಾಯಸಗಳ ತಯಾರಿಕೆಯಲ್ಲಿ, ಪನ್ನೀರ್ ನಂತಹ ರೆಸಿಪಿ ಮಾಡಲು, ಗಿಣ್ಣುವಿನಂತಹ ಸಿಹಿ ತಿನಿಸು ತಯಾರಿಸಲು, ದೇವರ ಮೂರ್ತಿಗೆ ಕ್ಷೀರಭಿಷೇಕ ಮಾಡಲು, ಮಗುವಿನ ಎರಡು ವರ್ಷದವರೆಗಿನ ಪ್ರಮುಖ ಆಹಾರವೇ ಹಾಲು.

ಅಂದಹಾಗೆ ಈಗೇಕೆ ಹಾಲಿನ ಬಗ್ಗೆ ಚರ್ಚೆ ಎಂದರೆ ಇಂದು ವಿಶ್ವ ಹಾಲು ದಿನ ವಾರ್ಷಿಕವಾಗಿ ಜೂನ್ 1 ರಂದು ಆಚರಿಸಲಾಗುತ್ತದೆ, ಇದು ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ (FAO) ಜಾಗತಿಕ ಆಹಾರವಾಗಿ ಹಾಲಿನ ಮಹತ್ವವನ್ನು ಉತ್ತೇಜಿಸಲು ಒಂದು ಜಾಗತಿಕ ಉಪಕ್ರಮವಾಗಿದೆ. ಹಾಲು ಮತ್ತು ಡೈರಿ ಉತ್ಪನ್ನಗಳ ಪೌಷ್ಟಿಕಾಂಶದ ಪ್ರಯೋಜನಗಳ ಬಗ್ಗೆ ಜಾಗೃತಿ ಮೂಡಿಸುವುದು ಇದರ ಗುರಿಯಾಗಿದೆ, ಜೊತೆಗೆ ಸುಸ್ಥಿರತೆ ಮತ್ತು ಆರ್ಥಿಕ ಅಭಿವೃದ್ಧಿಗೆ ಡೈರಿ ವಲಯದ ಕೊಡುಗೆಗಳ ಬಗ್ಗೆಯೂ ಜಾಗೃತಿ ಮೂಡಿಸುವುದು ಇದರ ಉದ್ದೇಶವಾಗಿದೆ.


**ವಿಶ್ವ ಹಾಲು ದಿನದ ಪ್ರಮುಖ ಅಂಶಗಳು:**

**ಹಾಲಿನ ಮಹತ್ವದ ಕುರಿತು ಆಚರಣೆ:**
ಈ ದಿನವು ಹಾಲಿನ ಪೌಷ್ಟಿಕಾಂಶದ ಮೌಲ್ಯವನ್ನು ಎತ್ತಿ ತೋರಿಸುತ್ತದೆ, ಇದು ಕ್ಯಾಲ್ಸಿಯಂ, ಪ್ರೋಟೀನ್ ಮತ್ತು ಇತರ ಅಗತ್ಯ ಪೋಷಕಾಂಶಗಳ ಸಮೃದ್ಧ ಮೂಲವಾಗಿದೆ.

**ಡೈರಿ ವಲಯದ ಉತ್ತೇಜನ:**
ಜಾಗತಿಕ ಆಹಾರ ಭದ್ರತೆ, ಜೀವನೋಪಾಯ ಮತ್ತು ಆರ್ಥಿಕ ಬೆಳವಣಿಗೆಯಲ್ಲಿ ಡೈರಿ ವಲಯದ ಪ್ರಮುಖ ಪಾತ್ರವನ್ನು ವಿಶ್ವ ಹಾಲು ದಿನವು ಗುರುತಿಸುತ್ತದೆ.

**ಜಾಗತಿಕ ಭಾಗವಹಿಸುವಿಕೆ:**

**ಜೂನ್ 1 ವಿಶ್ವ ಹಾಲು ದಿನ**




ಅನೇಕ ದೇಶಗಳು ವಿಶ್ವ ಹಾಲು ದಿನದ ಚಟುವಟಿಕೆಗಳಲ್ಲಿ ಭಾಗವಹಿಸುತ್ತವೆ, ಇದರಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು, ಕೃಷಿ ಭೇಟಿಗಳು ಮತ್ತು ಸಾಮಾಜಿಕ ಮಾಧ್ಯಮ ಅಭಿಯಾನಗಳು ಸೇರಿವೆ.

**ಆರ್ಥಿಕ ಕ್ಷೇತ್ರಕ್ಕೆ ಕೊಡುಗೆ:**
ಡೈರಿ ವಲಯವು ಜಾಗತಿಕ ಆರ್ಥಿಕತೆಗೆ ಪ್ರಮುಖ ಕೊಡುಗೆ ನೀಡುತ್ತಿದ್ದು, ಲಕ್ಷಾಂತರ ರೈತರು ಮತ್ತು ಕಾರ್ಮಿಕರನ್ನು ಬೆಂಬಲಿಸುತ್ತಿದೆ.

**ಸುಸ್ಥಿರತೆಯ ಗಮನ:**
ವಿಶ್ವ ಹಾಲು ದಿನವು ಡೈರಿ ಉದ್ಯಮದಲ್ಲಿ ಸುಸ್ಥಿರ ಅಭ್ಯಾಸಗಳ ಮಹತ್ವವನ್ನು ಒತ್ತಿಹೇಳುತ್ತದೆ.

**ಜಾಗತಿಕ ಡೈರಿ ಉದ್ಯಮಕ್ಕೆ ಭಾರತದ ಕೊಡುಗೆ:**
ಜಾಗತಿಕವಾಗಿ ಭಾರತವು ಅತಿ ಹೆಚ್ಚು ಹಾಲು ಉತ್ಪಾದಕ ರಾಷ್ಟ್ರವಾಗಿ ಹೊರಹೊಮ್ಮಿದೆ. 2023–24 ನೇ ಸಾಲಿನ ವರ್ಷದಲ್ಲಿ 239 ಮಿಲಿಯನ್ ಟನ್ ಹಾಲನ್ನು ಉತ್ಪಾದಿಸಿ ಕಳೆದ ವರ್ಷಕ್ಕಿಂತ ಶೇಕಡ 3.8 ರಷ್ಟು ಪ್ರಗತಿ ಸಾಧಿಸಿದ್ದೂ ಪ್ರತಿ ವರ್ಷ ಹಾಲಿನ ಉತ್ಪಾದಕತೆ ಹೆಚ್ಚುತ್ತಾ ಸಾಗಿದೆ. 1998 ರಿಂದಲೂ ಇದೆ ರೀತಿ ಮೊದಲ ಸ್ಥಾನ ವನ್ನು ಮುಂದುವರಿಸಿಕೊಂಡು ಸಾಗುತ್ತಿರಲು ಇಲ್ಲಿನ ಅನ್ನದಾತರ ಪರಿಶ್ರಮ ಹಾಗು ಅವರ ಕೊಡುಗೆ ಸಾಕ್ಷಿದೆ.

ಅಂದ ಹಾಗೆ ಉತ್ತರ ಪ್ರದೇಶ ದೇಶದಲ್ಲೇ ಅತಿ ಹೆಚ್ಚು ಹಾಲು ಉತ್ಪಾದಕ ರಾಜ್ಯವಾಗಿ ಹೊರಹೊಮ್ಮಿದ್ದರೆ ಕರ್ನಾಟಕವು 2025 ರ ವೇಳೆಗೆ ಎರಡನೇ ಸ್ಥಾನ ಪಡೆದು ದೇಶದ ಹಾಲು ಉತ್ಪಾದಕತೆಗೆ ತನ್ನದೇ ಆದ ಕೊಡುಗೆ ನೀಡುತ್ತಿದೆ.

**ಭಾರತದ ಆರ್ಥಿಕತೆಯಲ್ಲಿ ಕ್ಷೀರೋದ್ಯಮದ ಪಾತ್ರ :**
ಭಾರತವು ಹಳ್ಳಿಗಳ ದೇಶವಾಗಿದೆ ಶೇಕಡಾ 70ರಷ್ಟು ಜನತೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಕೃಷಿ ಮತ್ತು ಪಶುಸಂಗೋಪನೆಯನ್ನು ಅವಲಂಬಿಸಿ ಬದುಕನ್ನು ಕಟ್ಟಿಕೊಂಡಿದ್ದಾರೆ.ಅದರಲ್ಲೂ ವಿಶೇಷವಾಗಿ ಶೇಕಡಾ 80 ರಿಂದ 90 ರಷ್ಟು ಮಹಿಳೆಯರು ಪಶುಸಂಗೋಪನೆಯಲ್ಲಿ ತೊಡಗಿಸಿಕೊಂಡಿದ್ದು ಹಾಲಿನ ಉತ್ಪಾದಕತೆಯನ್ನು ಹೆಚ್ಚಿಸಲು ನಿರಂತರವಾಗಿ ಕೊಡಗೆ ನೀಡುತ್ತಿದ್ದಾರೆ.

ವರ್ಗೀಸ್ ಕುರಿಯನ್ ಅವರಿಂದ 1970ರ ದಶಕದಲ್ಲಿ ಆರಂಭಗೊಂಡ ಕ್ಷೀರಕ್ರಾಂತಿಯು ಹಾಲು ಉತ್ಪಾದಕತೆಯಲ್ಲಿ ಕ್ರಾಂತಿಯನ್ನು ಮಾಡಿದ್ದರ ಪರಿಣಾಮ ಇಂದು ದೇಶದ ಕೃಷಿ ಜಿಡಿಪಿಗೆ ಈ ಉದ್ಯಮವು ಶೇಕಡ 6ರಷ್ಟು ಕೊಡುಗೆ ನೀಡುತ್ತಿದೆ.

ದೇಶದ ಪ್ರತಿಷ್ಠಿತ ಅಮೂಲ್, ಕೆಎಂಎಫ್ ನಂತಹ ಸಂಸ್ಥೆಗಳು ದೇಶದಲ್ಲಿ ಡೈರಿ ಉದ್ಯಮವನ್ನು ಮುನ್ನಡೆಸುತ್ತಿದ್ದು ಹಾಲು ಉತ್ಪಾದಕತೆ, ಸಂಸ್ಕರಣೆ ರಫ್ತಿನಲ್ಲಿ ಪ್ರಮುಖ ಕೊಡುಗೆಯನ್ನು ನೀಡುತ್ತಿವೆ.

ದೇಶವು ಕೃಷಿ ಪ್ರಧಾನ ರಾಷ್ಟ್ರವಾಗಿದ್ದು ಕೃಷಿ ಮಾನ್ಸೂನನ್ನು ಅವಲಂಬಿಸಿದೆ. ಆದರೆ ಪ್ರತಿ ವರ್ಷವೂ ನಿರೀಕ್ಷಿತ ಮಳೆ ಆಗದೆ ಬರಗಾಲ ಸಂಭವಿಸುವ ಸಂದರ್ಭಕ್ಕೆ ಪಶು ಸಂಗೋಪನೆಯು ಬಡ ರೈತನ ಕಷ್ಟಕ್ಕೆ ಕೈ ಹಿಡಿದು ನಡೆಸುತ್ತದೆ.

ವಿಶ್ವ ಹಾಲು ದಿನ ಆಚರಣೆಯ ಹೊತ್ತಿನಲ್ಲಿ ಭಾರತವು ಜಾಗತಿಕವಾಗಿ ಪ್ರಥಮ ಹಾಲು ಉತ್ಪಾದಕರ ರಾಷ್ಟ್ರವಾಗಿದ್ದರು ಅದನ್ನು ಉತ್ಪಾದಿಸುವ ರೈತರಿಗೆ ಅದರ ಲಾಭವನ್ನು ನೀಡಬೇಕಿದೆ ಜೊತೆಗೆ ಡೈರಿ ಉದ್ಯಮ ಮತ್ತಷ್ಟು ಉತ್ಕೃಷ್ಟಗೊಳಿಸಲು ಸರ್ಕಾರಗಳು ಪರಿಣಾಮ ಕಾರಿಯಾದ ಕಾರ್ಯಕ್ರಮಗಳನ್ನ ಜಾರಿಗೊಳಿಸಬೇಕಿದೆ ಹಾಗೂ ತಲಾವರು ಹಾಲು ಬಳಕೆಯ ಪ್ರಮಾಣವನ್ನು ಮತ್ತಷ್ಟು ಹೆಚ್ಚಿಸಿ ಅಪೌಷ್ಟಿಕತೆ ಮುಕ್ತ ಭಾರತವನ್ನು ನಿರ್ಮಿಸಬೇಕಿದೆ.

– ಶಿವಣ್ಣ ಶಿಕ್ಷಕರು ಗಾಣಗಟ್ಟೆ.



ಬಳ್ಳಾರಿ ಜಿಲ್ಲೆ ಕುರುಗೋಡು ತಾಲ್ಲೂಕಿನ ಕೋಳೂರು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿದ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯವನ್ನು ಕಂಪ್ಲಿ ಶಾಸಕ ಜೆ.ಎನ್.ಗಣೇಶ್ ಶನಿವಾರ ಉದ್ಘಾಟಿಸಿದರು. ಅಧಿಕಾರಿಗಳಿದ್ದರು.

SBI RSETI


## ಎಸ್‌ಬಿಐ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ ವಿಜಯನಗರ ಜಿಲ್ಲೆ.

ವಿಜಯನಗರದ ಆರ್.ಎಸ್.ಇ.ಟಿ.ಐ (ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ) ಗಾಗಿ ಗುತ್ತಿಗೆ ಆಧಾರದ ಮೇಲೆ ಅಧ್ಯಾಪಕರು, ಕಚೇರಿ ಸಹಾಯಕರು ಮತ್ತು ಅಟೆಂಡರ್‌ಗಳ ನೇಮಕಾತಿ:

**ಪ್ರಕಟಣೆ**

| ವಿಷಯ | ವಿವರ |
|---|---|
| ವಿಷಯ | ಅಧ್ಯಾಪಕರು, ಕಚೇರಿ ಸಹಾಯಕರು ಮತ್ತು ಅಟೆಂಡರ್‌ಗಳ ನೇಮಕಾತಿ |
| ಅರ್ಹತೆ | * **ಅಧ್ಯಾಪಕರು**– ಪದವಿ/ಸ್ನಾತಕೋತ್ತರ ಪದವಿ ಹೊಂದಿರಬೇಕು. ಸ್ಥಳೀಯ/ಇಂಗ್ಲೀಷ್ ಭಾಷೆಯಲ್ಲಿ ಅತ್ಯುತ್ತಮ ಸಂವಹನ ಕೌಶಲ್ಯ ಮತ್ತು ಟೈಪಿಂಗ್ ಕೌಶಲ್ಯ ಕಂಪ್ಯೂಟರ್ ಜ್ಞಾನ, ಬೋಧನಾ ಕೌಶಲ್ಯದ ಅನುಭವವನ್ನು ಹೊಂದಿರಬೇಕು * **ಕಚೇರಿ ಸಹಾಯಕ** – ಕಂಪ್ಯೂಟರ್/ಲೆಕ್ಕಪತ್ರ ನಿರ್ವಹಣೆ ಜ್ಞಾನ, ಸ್ಥಳೀಯ/ಇಂಗ್ಲೀಷ್ ಭಾಷೆಯಲ್ಲಿ ಟೈಪಿಂಗ್ ಕೌಶಲ್ಯ ಹೊಂದಿರುವ ಪದವೀಧರರಾಗಿರಬೇಕು. * **ಅಟೆಂಡರ್** – ಮೆಟ್ರಿಕ್ಯುಲೇಷನ್ ಪೂರ್ಣಗೊಳಿಸಿರಬೇಕು. ಸ್ಥಳೀಯ ಭಾಷೆಯನ್ನು ಓದುವ ಮತ್ತು ಬರೆಯುವ ಸಾಮರ್ಥ್ಯಕ್ಕೆ ಆದ್ಯತೆ ನೀಡಬೇಕು |
| ಆಯ್ಕೆ ಪ್ರಕ್ರಿಯೆ | ಪರೀಕ್ಷೆ, ಸಂದರ್ಶನ, ಡೆಮೋ. |
| ಅರ್ಜಿ ಸಲ್ಲಿಸುವುದು | ಆಸಕ್ತ ಅರ್ಜಿದಾರರು ತಮ್ಮ ರೆಸ್ಯೂಮ್ ಅನ್ನು KYC ಪ್ರತಿ ಮತ್ತು ಎಲ್ಲಾ ಅರ್ಹತೆಗಳು ಮತ್ತು ಅನುಭವದ ವಿವರಗಳೊಂದಿಗೆ ಕಳುಹಿಸಬಹುದು. ಅಥವಾ / ನಿರ್ದೇಶಕರು KYC ವಿಜಯನಗರ ಸರ್ಕಾರಿ ಬಾಲಕಿಯರ ಪಿಯು ಕಾಲೇಜ್ ಆವರಣಕ್ಕೆ ಭೇಟಿ ನೀಡಿ, ಅರ್ಜಿ ಸಲ್ಲಿಸಬಹುದು. ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಹತ್ತಿರ, ಪೈ ಹೋಟೆಲ್ ಎದುರು, ಹೊಸಪೇಟೆ, ವಿಜಯನಗರ ಜಿಲ್ಲೆ, ಕರ್ನಾಟಕ–583201. (ಇ–ಮೇಲ್: rsetivijayanagar@gmail.com) ಗಮನಿಸಿ: |
| ಅರ್ಜಿಸಲ್ಲಿಸುವ ಕೊನೆ ದಿನ | ಪತ್ರಿಕೆ ಜಾಹೀರಾತು ದಿನಾಂಕದಿಂದ 15 ದಿನಗಳು |
| ವಿಶೇಷ ಸೂಚನೆ | * ಯಾವುದೇ ಕಾರಣ ನೀಡದೇ ಮೇಲೆ ತಿಳಿಸಿದ ಹುದ್ದೆಯನ್ನು ಭರ್ತಿ ಮಾಡುವ ಅಥವಾ ಭರ್ತಿ ಮಾಡದಿರುವ ಹಕ್ಕನ್ನು ಸೊಸೈಟಿ/ಟ್ರಸ್ಟ್ ಆಡಳಿತ ಮಂಡಳಿ ಕಾಯ್ದಿರಿಸಿದೆ. *ಯಾವುದೇ ಸೂಚನೆ/ಜಾಹೀರಾತು ವಿವರಗಳಿಲ್ಲದೆ ಯಾವುದೇ ಸಮಯದಲ್ಲಿ ಉಮೇದುವಾರಿಕೆಯನ್ನು ರದ್ದುಗೊಳಿಸುವ ಹಕ್ಕನ್ನು ಸೊಸೈಟಿ/ಟ್ರಸ್ಟ್/ ಬ್ಯಾಂಕ್ ಕಾಯ್ದಿರಿಸಿದೆ. |

ಸಹಿ/– ನಿರ್ದೇಶಕರು
ಎಸ್‌ಬಿಐ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ ವಿಜಯನಗರ



## ತುಂಗಭದ್ರಾ ನೀರಿನ ಮಟ್ಟ

ಶನಿವಾರ : 31–05–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1594.46 ಅಡಿ |
| ಒಳ ಹರಿವು | 17453 ಕ್ಯುಸೆಕ್ |
| ಹೊರ ಹರಿವು | 197 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 15.161 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1577.36 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 27 ಕ್ಯುಸೆಕ್ |
| ಸಾಮರ್ಥ್ಯ | 3.322 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ವಿಶ್ವಾವಸು

01–06–2025 – ಭಾನುವಾರ

| | |
|---|---|
| ತಿಥಿ | : ಷಷ್ಠಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಆಶ್ಲೇಷ |
| ಯೋಗ | : ಧ್ರುವ |
| ಕರಣ | : ಕೌಳವ |
| ಸೂರ್ಯೋದಯ | : 05:42:10 |
| ಸೂರ್ಯಾಸ್ತ | : 19:07:38 |
| ರಾಹು ಕಾಲ | : 17:27–19:08 |
| ಯಮಘಂಡ ಕಾಲ | : 12:25–14:06 |
| ಗುಳಿಕ ಕಾಲ | : 15:46–17:27 |

## ಕೋಳೂರು ಸರ್ಕಾರಿ ಆಯುರ್ವೇದ ಚಿಕಿತ್ಸಾಲಯದ ನೂತನ ಕಟ್ಟಡ ಉದ್ಘಾಟನೆ

ಹಂಪಿ ಟೈಮ್ಸ್ ಬಳ್ಳಾರಿ

ಕುರುಗೋಡು ತಾಲ್ಲೂಕಿನ ಕೋಳೂರು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿದ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯವನ್ನು ಕಂಪ್ಲಿ ಶಾಸಕ ಜೆ.ಎನ್.ಗಣೇಶ್ ಅವರು ಶನಿವಾರ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಯಾವುದೇ ಅಡ್ಡ ಪರಿಣಾಮಗಳಿಲ್ಲದ ಆಯುರ್ವೇದ ಚಿಕಿತ್ಸಾಲಯದ ಸೇವೆಗಳನ್ನು ಸಮರ್ಪಕವಾಗಿ ಸಾರ್ವಜನಿಕರು ಉಪಯೋಗಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಪ್ರತಿ ಖಾಯಿಲೆಗೂ ಆಯುರ್ವೇದ ವೈದ್ಯ ಪದ್ಧತಿಯಲ್ಲಿ ಉತ್ತಮವಾದ ಚಿಕಿತ್ಸೆ ಉಚಿತವಾಗಿ ಲಭ್ಯವಿದ್ದು, ಸಾರ್ವಜನಿಕರು ಚಿಕಿತ್ಸಾಲಯದ ಸೇವೆಯನ್ನು ಸದುಪಯೋಗ ಪಡೆಯಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕೋಳೂರು ಗ್ರಾಮ ಪಂಚಾಯತಿ ಅಧ್ಯಕ್ಷರಾದ ದೊಡ್ಡಬಸಮ್ಮ, ಉಪಾಧ್ಯಕ್ಷ ಚೆನ್ನಪ್ಪ, ಜಿಲ್ಲಾ ಆಯುಷ್ ಅಧಿಕಾರಿ ಡಾ.ಎಂ.ವಿರುಪಾಕ್ಷ, ಚಿಕಿತ್ಸಾಲಯದ ವೈದ್ಯಾಧಿಕಾರಿ ಡಾ.ಕೆ.ಪಿ.ಕಲ್ಯಾಣಿ ಸೇರಿದಂತೆ ಕೋಳೂರು ಗ್ರಾಮ ಪಂಚಾಯತಿಯ ಸರ್ವ ಸದಸ್ಯರು, ಗ್ರಾಮದ ಮುಖಂಡರು, ಸಾರ್ವ ಜನಿಕರು ಮತ್ತು ಚಿಕಿತ್ಸಾಲಯದ ಸಿಬ್ಬಂದಿ ವರ್ಗ ಇದ್ದರು.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ.
ಕೈಯಲ್ಲೊಂದು ಕನ್ನಡ ದಿನಪತ್ರಿಕೆ ಇರಲಿ.
ಡಿ.ವಿ.ಜಿ.

REACH your Customers with us!
Call us for PRINT & DIGITAL Advertisements
Effective, affordable and everywhere your customers are!
94486 33038
HAMPI TIMES - VIJAYANAGARA

# ನೆಪ ಕಾರಣ ಬೇಕಿಲ್ಲ ಪ್ರಗತಿ ತೋರಿಸಿ

### ಕಡಿಮೆ ಫಲಿತಾಂಶ ಡಿಡಿಪಿಐಗಳಿಗೆ ನೋಟಿಸ್ ನೀಡಿ ಕ್ರಮ ಕೈಗೊಳ್ಳಿ : ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಸಿಎಂ ಸೂಚನೆ

### ಎಸ್‌ಎಸ್‌ಎಲ್‌ಸಿ ಯಲ್ಲಿ ಫಲಿತಾಂಶ ಕಡಿಮೆ ಬರುವುದಕ್ಕೆ ಶಿಕ್ಷಕರ ಕೊರತೆ, ಸಿಬ್ಬಂದಿ ಕೊರತೆ ಎನ್ನುವ ನೆಪ ಹೇಳಬೇಡಿ



■ ಹಂಪಿ ಟೈಮ್ಸ್ ಬೆಂಗಳೂರು

ರಾಜ್ಯ ಸರ್ಕಾರದ ಯೋಜನೆಗಳ ಅನುಷ್ಠಾನ ಮತ್ತು ಪ್ರಗತಿ ಪರಿಶೀಲನೆ ಕುರಿತು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿ ಮತ್ತು ಜಿಪಂ ಸಿಇಒಗಳ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ ಅವರು ಶನಿವಾರ ವಿವಿಧ ಯೋಜನೆಗಳ ಪ್ರಗತಿ ನೋಟ ಪರಿಶೀಲಿಸಿ, ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮಕೈಗೊಳ್ಳಲು ಸೂಚಿಸಿದರು.

ಸಭೆಯ ಆರಂಭದಲ್ಲಿ ಶಾಲಾ ಶಿಕ್ಷಣ ಇಲಾಖೆ ಪ್ರಗತಿ ಪರಿಶೀಲನೆ ನಡೆಸಿದ ಮುಖ್ಯಮಂತ್ರಿಗಳು ಆರಂಭದಲ್ಲಿ ನೀಡಿದ ಸೂಚನೆಗಳು...

* ಎಸ್‌ಎಸ್‌ಎಲ್‌ಸಿ ಯಲ್ಲಿ ಫಲಿತಾಂಶ ಕಡಿಮೆ ಬರುವುದಕ್ಕೆ ಶಿಕ್ಷಕರ ಕೊರತೆ, ಸಿಬ್ಬಂದಿ ಕೊರತೆ ಎನ್ನುವ ನೆಪ ಹೇಳಬೇಡಿ. ದಕ್ಷಿಣ ಕನ್ನಡ ಮತ್ತು ಇತರೆ ಜಿಲ್ಲೆಗಳಲ್ಲಿ ಮಾತ್ರ ಉತ್ತಮ ಫಲಿತಾಂಶ ಬರುತ್ತಿದೆ. ಡಿಡಿಪಿಐಗಳು ಜವಾಬ್ದಾರಿ ತೆಗೆದುಕೊಳ್ಳಬೇಕು. ಡಿಸಿಪಿಐಗಳು ಮತ್ತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಶಾಲೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಶಿಕ್ಷಕರು ಆಸಕ್ತಿಯಿಂದ ಕೆಲಸ ಮಾಡುತ್ತಿದ್ದಾರೋ ಇಲ್ಲವೋ ಎನ್ನುವುದನ್ನು ಪರಿಶೀಲನೆ ನಡೆಸಬೇಕು. ಇಲ್ಲ ಸಲ್ಲಸ ನೆಪ ಹೇಳಬೇಡಿ. ಶಿಕ್ಷಕರು ಮತ್ತು ಡಿಡಿಪಿಐ ಗಳು ಆಸಕ್ತಿಯಿಂದ ಕೆಲಸ ಮಾಡಿದರೆ ಉತ್ತಮ ಫಲಿತಾಂಶ ಎಲ್ಲಾ ಕಡೆ ಬರುತ್ತದೆ ಎಂದು ಮುಖ್ಯಮಂತ್ರಿಗಳು ಸೂಚಿಸಿದರು.

* ವಿವೇಕ ಯೋಜನೆಯಡಿಯಲ್ಲಿ ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಹಣ ಮಂಜೂರು ಮಾಡುವುದರಲ್ಲಿ ವಿಳಂಬ ಆಗಬಾರದು. ಕ್ರಿಯಾ ಯೋಜನೆ ತಕ್ಷಣ ತಕ್ಷಣ ಸಿದ್ದಪಡಿಸಬೇಕು. ಹಣ ಬಿಡುಗಡೆ ಆಗಿದ್ದರೂ ಇನ್ನೂ ಶಾಲಾ ಕೊಠಡಿಗಳ ನಿರ್ಮಾಣ ಆಗದಿರುವ ಬಗ್ಗೆ ಜಿಲ್ಲಾಧಿಕಾರಿಗಳನ್ನು ಸಿಎಂ ಪ್ರಶ್ನಿಸಿದರು.

* ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಪ್ರಮಾಣ ಕಡಿಮೆ ಆಗದಂತೆ ಶಿಕ್ಷಕರು ಮತ್ತು ಅಧಿಕಾರಿಗಳು ಪೋಷಕರ ಜೊತೆ ಮಾತನಾಡಬೇಕು, ಡ್ರಾಪ್‌ಔಟ್ ತಡೆಯಲು ಏನೆಲ್ಲಾ ಸಾಧ್ಯವೋ ಎಲ್ಲವನ್ನೂ ಮಾಡಬೇಕು. ಡಿಡಿಪಿಐ ಗಳು, ಬಿಇಒ ಗಳು ಶಾಲೆಗಳಿಗೆ ಭೇಟಿ ನೀಡ್ತಾ ಇದಾರಾ ಎನ್ನುವ ಬಗ್ಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಬೇಕು. ಪ್ರತೀ ವರ್ಷ ಸರ್ಕಾರಿ ಶಾಲೆಗಳ ದಾಖಲಾತಿ ಪ್ರಮಾಣ ಕಡಿಮೆ ಆಗುತ್ತಿರುವುದು ಕೆಟ್ಟ ಬೆಳವಣಿಗೆ. ಸರ್ಕಾರ ಮೊಟ್ಟೆ, ಹಾಲು, ರಾಗಿಮಾಲ್ಟ್, ಸೂಪು, ಹಾಸ್ಟೆಲ್ ಸವಲತ್ತು ಎಲ್ಲಾ ಕೊಟ್ಟು ಮಕ್ಕಳ ದಾಖಲಾತಿ ಪ್ರಮಾಣ ಏಕೆ ಕಡಿಮೆ ಆಗುತ್ತಿದೆ. ನಿಮ್ಮ ಪ್ರಾಯೋಗಿಕ ಅನುಭವಗಳು ಏನು ಎಂದು ಅಧಿಕಾರಿಗಳಿಂದ ಮಾಹಿತಿ ಪಡೆದು ಸಮಸ್ಯೆಗಳನ್ನು ಬಗೆಹರಿಸಲು ಅಗತ್ಯ ಕ್ರಮಕ್ಕೆ ಸಿಎಂ ಸೂಚಿಸಿದರು.

* ಬೆಳೆಯುವ ಸಿರಿ ಮೊಳಕೆಯಲ್ಲಿ ಎನ್ನುವುದನ್ನು ಗಮನದಲ್ಲಿಡಿ. ಡಿಡಿಪಿಐ ಗಳು ಜಿಲ್ಲೆಗಳಲ್ಲಿ ಕುಳಿತು ಕೆಲಸ ಮಾಡುವುದಲ್ಲ. ಇಡೀ ಜಿಲ್ಲೆ ಪ್ರಯಾಣ ಮಾಡಬೇಕು. ಸಿಇಒ ಗಳು ಕಡ್ಡಾಯವಾಗಿ ಈ ಬಗ್ಗೆ ನಿಗಾ ವಹಿಸಿ ಪೋಷಕರ ಜೊತೆ ಸಭೆ ನಡೆಸಿ ಚರ್ಚಿಸಲೇಬೇಕು ಎಂದು ಸಿಎಂ ತಾಕೀತು ಮಾಡಿದರು.

* ಪರೀಕ್ಷಾ ಫಲಿತಾಂಶದಲ್ಲಿ ಮತ್ತು ಮಕ್ಕಳ ದಾಖಲಾತಿ ಯಲ್ಲಿ ರಾಜ್ಯ ಸರಾಸರಿಗಿಂತ ಶೇಕಡಾವಾರು ಕಡಿಮೆ ಫಲಿತಾಂಶ ಪಡೆದಿರುವ ಜಿಲ್ಲೆಗಳ ಸಿಇಒ ಮತ್ತು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೆ ಖಡಕ್ ಸೂಚನೆ ನೀಡಿ ಮುಂದಿನ ಶೈಕ್ಷಣಿಕ ಸಾಲಿನ ಹೊತ್ತಿಗೆ ಪರಿಸ್ಥಿತಿ ಉತ್ತಮಗೊಳ್ಳಬೇಕು ಎಂದು ತಿಳಿಸಿದರು.

### ಡಿಡಿಪಿಐಗಳಿಗೆ ನೋಟಿಸ್ ನೀಡಿ ಕ್ರಮ ಕೈಗೊಳ್ಳಿ : ಸಿಎಂ ಸೂಚನೆ

**ಎಸ್ಸೆಸ್ಸೆಲ್ಸಿಯಲ್ಲಿ ಶೇ 60 ಕ್ಕಿಂತ ಕಡಿಮೆ ಫಲಿತಾಂಶ ಪಡೆದಿರುವ ಜಿಲ್ಲೆಗಳ ಡಿಡಿಪಿಐಗಳಿಗೆ ನೋಟಿಸ್ ನೀಡಬೇಕು, ನೋಟಿಸ್‌ಗೆ ಕೊಟ್ಟ ಉತ್ತರ ಸಮರ್ಪಕ ಅನ್ನಿಸದಿದ್ದರೆ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿಗಳು, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಸಿಎಂ ಸೂಚನೆ ನೀಡಿದರು.**

* ಕಲ್ಯಾಣ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕ ಜಿಲ್ಲೆಗಳ ಸಿಇಓ ಗಳು ಹೆಚ್ಚಿನ ಆಸಕ್ತಿ ಕೊಟ್ಟು ಈ ಬಗ್ಗೆ ನಿಗಾ ಇಡಬೇಕು. ಫಲಿತಾಂಶ ಕಡಿಮೆ ಇರುವುದಕ್ಕೆ ಕಾರಣಗಳು, ನೆಪಗಳು ಮುಖ್ಯ ಅಲ್ಲ, ಫಲಿತಾಂಶ ತರುವುದು ಮುಖ್ಯ. ಪ್ರಾಮಾಣಿಕ ಪ್ರಯತ್ನ ಇದ್ದರೆ ಪ್ರಾಮಾಣಿಕ ಫಲಿತಾಂಶ ಬರುತ್ತದೆ ಎಂದರು.

## ಕುರಿಗಾಹಿಗಳಿಗೆ ಅರಣ್ಯ ಇಲಾಖೆಯ ಸಿಬ್ಬಂದಿ ಕೊಡುತ್ತಿರುವ ಕಿರುಕುಳ ತಕ್ಷಣ ನಿಲ್ಲಬೇಕು

* ಯುವನಿಧಿ ಫಲಾನುಭವಿ ನಿರುದ್ಯೋಗಿಗಳಿಗೆ ಉದ್ಯೋಗ, ತರಬೇತಿ ಸಿಗಬೇಕು. ಮಾರುಕಟ್ಟೆಯ ಬೇಡಿಕೆಗೆ ತಕ್ಕಂತೆ ತರಬೇತಿ ನೀಡಿ, ಉದ್ಯೋಗ ಕೈಗೆ ಸಿಗುವಂತಾಗಬೇಕು. ತರಬೇತಿ ಪಡೆದವರೆಲ್ಲರಿಗೂ ಉದ್ಯೋಗ ಸಿಗದೇ ಹೋಗಬಹುದು. ಆದರೆ ತರಬೇತಿ ಮಾತ್ರ ಹೆಚ್ಚೆಚ್ಚು ನಿರುದ್ಯೋಗಿ ಮತ್ತು ಯುವನಿಧಿ ಫಲಾನುಭವಿಗಳಿಗೆ ನೀಡಬೇಕು ಎಂದು ಸಿಎಂ ಸೂಚನೆ ನೀಡಿದರು.



* ಜಿಲ್ಲಾಧಿಕಾರಿಗಳು ನಿಯಮಿತವಾಗಿ ಡೈರಿ ಬರೆಯುವ ಅಭ್ಯಾಸ ಮಾಡಿಕೊಳ್ಳಬೇಕು, ಆ ಡೈರಿಯಲ್ಲಿ ಫೀಲ್ಡ್ ವರ್ಕ್ ಅನುಭವಗಳು, ಸಮಸ್ಯೆಗಳು, ಪರಿಹಾರ ಎಲ್ಲದರ ಬಗ್ಗೆಯೂ ಉಲ್ಲೇಖವಿರಬೇಕು ಎಂದು ಕಳೆದ ವರ್ಷದ ಸಭೆಯಲ್ಲಿ ಮತ್ತು ಎಲ್ಲಾ ಕೆಡಿಪಿ ಸಭೆಗಳಲ್ಲಿ ನಾನು ಸೂಚನೆ ನೀಡಿದ್ದೆ. ಇನ್ನೂ ಕೆಲವರು ಸಮರ್ಪವಾಗಿ ಡೈರಿಗಳನ್ನು ಬರೆದಿಲ್ಲ ಎನ್ನುವ ಮಾಹಿತಿ ಇದೆ. ನೀವು ಬರೆದ ಡೈರಿಗಳು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಬಂದರೆ ನಾನೂ ಗಮನಿಸಬಹುದು ಎಂದು ಸೂಚನೆ ನೀಡಿದರು.

* ಕುರಿಗಾಹಿಗಳ ಮೇಲೆ ಅರಣ್ಯ ಇಲಾಖೆಯವರು ಅವೈಜ್ಞಾನಿಕವಾಗಿ ಕೇಸು ದಾಖಲಿಸುವುದು ಮತ್ತು ಅನಗತ್ಯ ತೊಂದರೆ ಕೊಡುವ ಬಗ್ಗೆ ವರದಿಗಳು, ದೂರುಗಳು ಬಂದಿವೆ. ಇದನ್ನು ನಿಲ್ಲಿಸಬೇಕು. ಕುರಿಗಳು ತಲೆ ಎತ್ತಿ ಮೇಯುವುದಿಲ್ಲ. ಅವು ತಲೆ ಬಗ್ಗಿಸಿಕೊಂಡು ಮೇಯುವುದರಿಂದ ಅರಣ್ಯ ಸಿಬ್ಬಂದಿಯ ತಪ್ಪು ಗ್ರಹಿಕೆಯಿಂದ ಕುರಿಗಾಹಿಗಳಿಗೆ ತೊಂದರೆ ಆಗುತ್ತಿದೆ ಇದನ್ನು ತಪ್ಪಿಸಿ ಎಂದರು.

* ನೀವೆಲ್ಲಾ ಯುವ ಜಿಲ್ಲಾಧಿಕಾರಿಗಳಿದ್ದೀರಿ. ನಿಮಗೆ ಫೀಲ್ಡ್ ಎಕ್ಸ್‌ಪೀರಿಯನ್ಸ್ ಚನ್ನಾಗಿ ಇರುತ್ತದೆ. ನೀವು ಕೆಲಸ ಮಾಡುವ ಜಿಲ್ಲೆಗಳಲ್ಲಿ ಹೆಜ್ಜೆ ಗುರುತುಗಳನ್ನು ಉಳಿಸಿ ಹೋಗುವ ದಿಕ್ಕಿನಲ್ಲಿ ಇನ್ನೋವೇಟೀವ್ ಆಗಿ ಕೆಲಸ ಮಾಡಿ ತೋರಿಸಿ. ನಿಮ್ಮ ಹೆಸರು ಜಿಲ್ಲೆಗಳಲ್ಲಿ, ರಾಜ್ಯದಲ್ಲಿ ಅಚ್ಚಳಿಯದೆ ಉಳಿಯುವ ರೀತಿಯಲ್ಲಿ ದಾಖಲೆ ಮಾಡಿ ತೋರಿಸಿ ಮುಖ್ಯ ಮಂತ್ರಿಗಳು ಅಧಿಕಾರಿಗಳಿಗೆ ಹುರಿದುಂಬಿಸಿದರು.

* ಕುರಿಗಾಹಿಗಳಿಗೆ ಕುರಿಗಳ ಮತ್ತು ತಮ್ಮ ಜೀವದ ರಕ್ಷಣೆಗೆ ಬಂದೂಕು ಪರವಾನಗಿ ಕೊಡಬೇಕು ಎಂದು ಸೂಚಿಸಿದ್ದೆ. ಇದಿನ್ನೂ ಕೆಲವು ಕಡೆ ಜಾರಿಗೆ ಬಂದಿಲ್ಲ. ಕುರಿಗಳ್ಳರು ಕುರಿಗಳನ್ನು ಕದಿಯುವ ಜೊತೆಗೆ, ಕುರಿಗಾಹಿಗಳನ್ನು ಕೊಲೆ ಮಾಡಿರುವ ಘಟನೆಗಳೂ ಕೂಡ ನಡೆದಿವೆ. ಹೀಗಾಗಿ ಬಂದೂಕು ಪರವಾನಗಿ ಕೊಡುವುದನ್ನು ಸಮರ್ಪಗೊಳಿಸಬೇಕು ಎನ್ನುವ ಸೂಚನೆ ನೀಡಿದರು. ಈ ವೇಳೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು, ಕುರಿಗಾಹಿಗಳಿಗೆ ಬಂದೂಕು ನೀಡುವ ಕಾರ್ಯದ ಬಗ್ಗೆ ನಿಗಾ ಇಡಲು ಹಿರಿಯ ಅಧಿಕಾರಿಯೊಬ್ಬರನ್ನು ನಿಯೋಜಿಸುವುದಾಗಿ ತಿಳಿಸಿದರು.

### ಆನೆ,ಮಾನವ ಸಂಘರ್ಷಕ್ಕೆ Honey ಯೋಜನೆ : ಸಚಿವ ಲಾಡ್

ರಾಜ್ಯದಲ್ಲಿ ಹಲವು ಕಡೆ ಮಾನವ ಪ್ರಾಣಿ ಸಂಘರ್ಷದ ವೇಳೆ ಪ್ರಾಣಹಾನಿ ಆಗಿರುವ ಬಗ್ಗೆ ಮತ್ತು ಇದಕ್ಕೆ ವೈಜ್ಞಾನಿಕ ಪರಿಹಾರ ಒದಗಿಸುವ ಬಗ್ಗೆ ಗಂಭೀರ ಚರ್ಚೆ ಸಭೆಯಲ್ಲಿ ನಡೆಯಿತು.

ಈ ವೇಳೆ ಸಚಿವ ಸಂತೋಷ್ ಲಾಡ್ ಅವರು , "ಊಂಟಿಜಥಿ ಜಿಜಟಿಭಿಟಿರ, ಜೇನು ಕೃಷಿ" ಬಗ್ಗೆ ಮುಖ್ಯಮಂತ್ರಿಗಳಿಗೆ ವಿವರಿಸಿದರು. ಆನೆಗಳು ಜೇನು ನೊಣ ಇರುವ ಪ್ರದೇಶಕ್ಕೆ ಬರುವುದಿಲ್ಲ. ಹೀಗಾಗಿ ಆನೆ ಬ್ಯಾರಿಕೇಡ್ ಹಾಕಿರುವ ಮಾರ್ಗದುದ್ದಕ್ಕೂ ಜೇನು ಕೃಷಿ ಮಾಡಿದರೆ ರೈತರಿಗೂ ಅನುಕೂಲ, ಆನೆಗಳ ಕಾಟವೂ ತಪ್ಪುತ್ತದೆ ಎಂದು ವಿವರಿಸಿದರು.

* ಉತ್ತರ ಕರ್ನಾಟಕ ಭಾಗದ ಹಲವು ಜಿಲ್ಲೆಗಳಲ್ಲಿ ಜಿಂಕೆ ಗಳಿಂದ ರೈತರ ಬೆಳೆಗಳಿಗೆ ಹಾನಿ ಉಂಟಾಗುತ್ತಿದೆ. ಇದನ್ನು ತಡೆಯಲು ಕ್ರಮ ಕೈಗೊಳ್ಳಬೇಕು.

* ರಾಜ್ಯದಲ್ಲಿ 15,16,731 ಎಕ್ರೆ ಅರಣ್ಯೀಕರಣಕ್ಕೆ ಜಮೀನು ಲಭ್ಯವಿದೆ. 8.5 ಕೋಟಿ ಸಸಿಗಳನ್ನು ಕಳೆದ ಎರಡು ವರ್ಷಗಳಲ್ಲಿ ನೆಡಲಾಗಿದೆ. ಪ್ರತಿ ವರ್ಷ ಎಷ್ಟು ಎಕ್ರೆ ಅರಣ್ಯೀಕರಣವಾಗಿದೆ? ಕಳೆದ 10ವರ್ಷಗಳಲ್ಲಿ ಎಷ್ಟು ಎಕ್ರೆ ಅರಣ್ಯೀಕರಣ ಮಾಡಲಾಗಿದೆ ಎಂಬ ಮಾಹಿತಿಯನ್ನು ಒದಗಿಸಬೇಕು.

* ಅರಣ್ಯೀಕರಣಕ್ಕೆ ಲಭ್ಯವಿರುವ ಜಮೀನಿನಲ್ಲಿ ಸಂಪೂರ್ಣ ಸಸಿಗಳನ್ನು ನೆಡಲು ಕ್ರಿಯಾ ಯೋಜನೆ ಸಿದ್ಧಪಡಿಸಿ, ಹಂತ ಹಂತವಾಗಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಬೇಕು.

* ಆನೆ ಮತ್ತು ಮಾನವ ಸಂಘರ್ಷ ತಡೆಯಲು ಸಮರ್ಪಕ ಕ್ರಮಗಳನ್ನು ಕೈಗೊಳ್ಳಬೇಕು. ಆನೆ ಕಾರ್ಯಪಡೆಗಳು ಸಕ್ರಿಯವಾಗಿ ಕಾರ್ಯನಿರ್ವಹಿಸಬೇಕು. ಆನೆಗಳಿಗೆ ಸರಿಯಾದ ಆಹಾರ ಕಾಡಿನಲ್ಲೇ ಲಭ್ಯವಾಗುವಂತೆ ಮಾಡಬೇಕು. ಇದಕ್ಕೆ ಪೂರಕವಾಗಿ ಲಂಟಾನಾ ಕಳೆಗಳನ್ನು ತೆಗೆಯುವ ಕೆಲಸವಾಗಬೇಕು. ಇದೇ ರೀತಿ ಕುಡಿಯುವ ನೀರಿನ ಲಭ್ಯತೆಯೂ ಕಾಡಿನಲ್ಲಿ ಸಾಕಷ್ಟು ಪ್ರಮಾಣದಲ್ಲಿ ಇರುವಂತೆ ನೋಡಿಕೊಳ್ಳಬೇಕು.

* ಸಣ್ಣ ನೀರಾವರಿ ಇಲಾಖೆ ಕೆರೆಗಳಲ್ಲಿ ಮೀನು ಸಾಕಣೆ ಮತ್ತು ಹರಾಜು ಪ್ರಕ್ರಿಯೆಯನ್ನು ಇ ಟೆಂಡರ್ ಮೂಲಕ ನಿರ್ವಹಿಸಬೇಕು. ಕೆರೆಗಳ ಅಭಿವೃದ್ಧಿ ಮಾಡಿ ಪ್ರವಾಸೋದ್ಯಮ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು. ಇದು ಆದಾಯದ ಮೂಲವೂ ಆಗುತ್ತದೆ.

## ಶಿಕ್ಷಕರು, ಸರ್ಕಾರಿ ನೌಕರರ ಬಳಿಯೂ ಬಿಪಿಎಲ್ ಪಡಿತರ ಚೀಟಿಗಳಿವೆ



* ಶೇಕಡಾವಾರು ತೀವ್ರ ಅಪೌಷ್ಠಿಕ ಮಕ್ಕಳ ಸಂಖ್ಯೆ ಹೆಚ್ಚಾಗಿರುವ ಜಿಲ್ಲೆಗಳ ಪ್ರತೀ ವರ್ಷ ನಿಮ್ಮ ನಿಮ್ಮ ಜಿಲ್ಲೆಗಳಲ್ಲಿ ಶೇ1 ರಷ್ಟು ಕಡಿಮೆ ಮಾಡಿಕೊಂಡು ಹೋಗಲು ಸಾಧ್ಯವಿದೆ. ಒಂದೇ ಸಾರಿಗೆ ನಿಲ್ಲಿಸಲು ಸಾಧ್ಯವಿಲ್ಲ ಎನ್ನುವುದಕ್ಕೆ ಸಾಮಾಜಿಕ ಕಾರಣಗಳೂ ಇವೆ. ಆದ್ದರಿಂದ ಪ್ರತೀ ವರ್ಷ ಶೇ1 ರಷ್ಟು ಪ್ರಮಾಣ ಕಡಿಮೆ ಮಾಡಿಕೊಂಡು ಬಂದರೆ ಅಪೌಷ್ಠಿಕ ಮಕ್ಕಳ ಸಂಖ್ಯೆಯನ್ನು ಕಡಿಮೆ ಮಾಡಬಹುದು ಎನ್ನುವ ಸೂಚನೆ ನೀಡಿದರು. ಬೀದರ್, ವಿಜಯನಗರ, ಬಳ್ಳಾರಿ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಸಿಎಂ ಈ ಸೂಚನೆ ನೀಡಿದರು.

* ಮಕ್ಕಳ ಹಿಮೋಗ್ಲೋಬಿನ್ ಪ್ರಮಾಣ ಸೇರಿ ಅವರ ಆರೋಗ್ಯ ತಪಾಸಣೆ ನಿರಂತರವಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಹಾಲಿ, ಮೊಟ್ಟೆ, ಮಾತ್ರೆ ಎಲ್ಲವನ್ನೂ ಕೊಡುತ್ತಿದ್ದರೂ ಏಕೆ ಕೆಲವು ಕಡೆ ಮಹಿಳೆಯರ ಮತ್ತು ಮಕ್ಕಳ ಪೌಷ್ಠಿಕ ಮಟ್ಟ ಮಾತ್ರ ಸುಧಾರಿಸುತ್ತಿಲ್ಲ ಎನ್ನುವ ಬಗ್ಗೆ ವೈಜ್ಞಾನಿಕ ವರದಿ ನೀಡಿ, ವರದಿ ಆಧಾರದಲ್ಲಿ ಅಗತ್ಯ ಸುಧಾರಣಾ ಕ್ರಮ ಕೈಗೊಳ್ಳಬಹುದು ಎಂದು ಸಿಎಂ ತಿಳಿಸಿದರು.

* ರಾಷ್ಟ್ರೀಯ ಹೆದ್ದಾರಿಪ್ರಾಧಿಕಾರದ ಹಲವು ಯೋಜನೆಗಳಲ್ಲಿ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ತಾಂತ್ರಿಕ ತೊಂದರೆಗಳನ್ನು ಅಧಿಕಾರಿಗಳು ಮುಂದಿಟ್ಟಾಗ ಗರಂ ಆದ ಮುಖ್ಯಮಂತ್ರಿಗಳು, ಎಷ್ಟು ವರ್ಷಗಳಿಂದ ಇದೇ ಕತೆ ಹೇಳಿಕೊಂಡು ಕೂತಿರ್ತೀರಿ ? ಅಗತ್ಯ ಬಿದ್ದರೆ ಭೂ ಸ್ವಾಧೀನಕ್ಕಾಗಿಯೇ ವಿಶೇಷ ಅಧಿಕಾರಿಯನ್ನು ನೇಮಿಸಲು ನಾವು ಸಿದ್ದರಿದ್ದೇವೆ. ನೇಮಕ ಮಾಡಿಕೊಳ್ಳಿ. ಹಳೆ ಯೋಜನೆಗಳು ಪೂರ್ಣಗೊಳ್ಳದ ಹೊರತು ಹೊಸ ಹೆದ್ದಾರಿ ಯೋಜನೆಗಳು ನಮಗೆ ಸಿಗುವುದಿಲ್ಲ ಎಂದರು, ಇದಕ್ಕೆ ಧ್ವನಿಗೂಡಿಸಿದ ಸಚಿವ ಸತೀಶ್ ಜಾರಕಿಹೊಳಿಯವರು, 42 ಬಾಕಿ ಯೋಜನೆಗಳಲ್ಲಿ ನಾವು 22ಯೋಜನೆಗಳನ್ನು ಮುಗಿಸಿದ್ದೇವೆ. ಕೇಂದ್ರದಿಂದಲೇ ಬಹಳ ಮಸ್ಯೆ ಆಗುತ್ತಿದೆ. ಕೇಂದ್ರದ ಅಧಿಕಾರಿಗಳು ಹಲವು ಕಡೆ ಇನ್ನಷ್ಟು ಹೆಚ್ಚು ಕ್ರಿಯಾಶೀಲವಾಗಿ ಮಾಡಬೇಕಿದೆ ಎಂದರು.

*ಎಲ್ಲೆಲ್ಲಿ ಬಾಟಲ್ ನೆಕ್ ಸಮಸ್ಯೆ ಇದೆ ಅವುಗಳನ್ನು ಮೊದಲ ಆಧ್ಯತೆ ನೀಡಿ ಬಗೆಹರಿಸಬೇಕು. ಎಸ್‌ಎಲ್‌ಎಒ ಗಳು ಜಿಲ್ಲಾಧಿಕಾರಿಗಳ ಅಧೀನದಲ್ಲಿ ಬರುವಂತೆ ಒಂದು ಛಿಡಿಛಿಣಟಚಿಡಿ ಹೊರಡಿಸುವಂತೆ ಮುಖ್ಯಮಂತ್ರಿಗಳು ಸೂಚಿಸಿದರು. ಮೇಲಿಂದ ಮೇಲೆ ಪರಿಶೀಲನೆ ನಡೆಸುತ್ತಿದ್ದರೆ ಪರಿಸ್ಥಿತಿ ಸುಧಾರಿಸಬಹುದು ಎಂದು ಸಚಿವ ಕೃಷ್ಣಬೈರೇಗೌಡರು ಸೂಚನೆ ನೀಡಿದರು.

* ಎಸ್‌ಎಲ್‌ಎಓ ಗಳ ಪ್ರಾಕ್ಟೀಸ್ ಅಷ್ಟು ಸರಿ ಇಲ್ಲ. ಮಾರುಕಟ್ಟೆ ಬೆಲೆ, ಗೈಡೆನ್ಸ್ ಬೆಲೆಗೂ ಇವರು ತರುವ ಬೆಲೆಗೂ ಯದ್ವಾ ತದ್ವಾ ವ್ಯತ್ಯಾಸ ಇರುತ್ತದೆ. ಇದು ಸರ್ಕಾರದ ಮೇಲೆ ಅನಗತ್ಯ ಹೊರೆ ಬೀಳುತ್ತದೆ. ಇದರಲ್ಲಿ ಎಸ್ ಎಲ್ ಎ ಒ ಗಳ ವರ್ತನೆಗಳು, ಪ್ರಾಕ್ಟೀಸ್ ಸರಿ ಇಲ್ಲ. ಹೀಗಾಗಿ ಇವರನ್ನು ಜಿಲ್ಲಾಧಿಕಾರಿಗಳ ಅಧೀನಕ್ಕೆ ತರುವುದು ಉತ್ತಮ ಎನ್ನುವ ಅಭಿಪ್ರಾಯವನ್ನು ಸಭೆಯಲ್ಲಿ ಸಚಿವರುಗಳು ಮತ್ತು ಅಧಿಕಾರಿಗಳು ಅಭಿಪ್ರಾಯ ವ್ಯಕ್ತಪಡಿಸಿದರು. ಮುಖ್ಯಮಂತ್ರಿಗಳು ಈ ಬಗ್ಗೆ ಸಮಗ್ರ ಪರಿಶೀಲನೆ ಮಾಡಿ ಜಿಲ್ಲಾಧಿಕಾರಿಗಳ ಅಧೀನಕ್ಕೆ ತರುವಂತೆ ಸೂಚನೆ ನೀಡಿದರು.

* ಅನರ್ಹ ಪಡಿತರ ಚೀಟಿದಾರರ ಸಂಖ್ಯೆ ವಿಪರೀತ ಹೆಚ್ಚುತ್ತಿರುವುದಕ್ಕೆ ಕಾರಣ ಏನು? ವೈಜ್ಞಾನಿಕ ಅಂಕಿಅಂಶಗಳು ಬೇರೆಯೇ ಹೇಳುತ್ತಿವೆ. ಯಾವ ಜಿಲ್ಲೆಯಲ್ಲೂ ಶೇ60 ಕ್ಕಿಂತ ಹೆಚ್ಚು ಅರ್ಹರು ಇರಲು ಸಾಧ್ಯವಿಲ್ಲ. ಇದರಲ್ಲಿ ಸ್ವಲ್ಪ ಪ್ರಮಾಣದಲ್ಲಿ ವ್ಯತ್ಯಾಸ ಇರಬಹುದು. ಆದರೆ ಶೇ80, ಶೇ90 ಅಂತೆಲ್ಲಾ ಇದ್ದರೆ ಅದನ್ನು ಯಾವ ಮಾನದಂಡದಲ್ಲೂ ಒಪ್ಪಲು ಸಾಧ್ಯವಿಲ್ಲ. ಇದರಿಂದ ದೊಡ್ಡ ಅನ್ಯಾಯ ಆಗುವುದು ನಿಜವಾದ ಅರ್ಹರಿಗೆ. ಅರ್ಹರಿಗೆ ಅನ್ಯಾಯ ಆಗುವುದನ್ನು ತಡೆಯಲು ನಕಲಿ, ಡೂಪ್ಲಿಕೇಟ್ ಮತ್ತು ಅನರ್ಹ ಕಾರ್ಡ್‌ಗಳನ್ನು ತಡೆಯಬೇಕು ಎಂದು ಮುಖ್ಯಮಂತ್ರಿಗಳು ಸೂಚಿಸಿದರು.

* ಶಿಕ್ಷಕರು, ಸರ್ಕಾರಿ ನೌಕರರ ಬಳಿಯೂ ಬಿಪಿಎಲ್ ಪಡಿತರ ಚೀಟಿಗಳಿವೆ. ಇವರಲ್ಲಿ ಹಲವರು ಪಡಿತರ ಪಡೆಯುವುದಿಲ್ಲ. ಆದರೆ ಆಸ್ಪತ್ರೆಗಳಿಗೆ ಹೋಗಲು ಮತ್ತು ಇನ್ನಿತರೆ ಅಗತ್ಯಗಳಿಗೆ ಕಾರ್ಡ್‌ಗಳನ್ನು ಬಳಸುತ್ತಿದ್ದಾರೆ ಎನ್ನುವ ಮಾಹಿತಿಯನ್ನು ಅಧಿಕಾರಿಗಳು ಸಭೆಗೆ ನೀಡಿದರು.

* ಅರ್ಹರು ಯಾವುದೇ ಕಾರಣಕ್ಕೂ ತಪ್ಪಬಾರದು. ಅರ್ಹರಿಗೆ ಸವಲತ್ತು ತಪ್ಪಬಾರದು, ಸಮಸ್ಯೆ ಆಗಬಾರದು. ಆದರೆ ಅರ್ಹರಿಗೆ ಸಮಸ್ಯೆ ಆಗದಂತೆ ಅನರ್ಹ ಕಾರ್ಡ್‌ಗಳನ್ನು ರದ್ದಾಗುವ ದಿಕ್ಕಿನಲ್ಲಿ ಏನೇನು ಮಾಡಬಹುದು ಎನ್ನುವ ಬಗ್ಗೆ ಜಿಲ್ಲಾಧಿಕಾರಿಗಳಿಂದ ಉತ್ತರ ಕೇಳಿದರು. ನಿಮ್ಮ ಪ್ರಾಯೋಗಿಕ ಅನುಭವದಲ್ಲಿ ಏನೇನು ಸಮಸ್ಯೆಗಳನ್ನು ಎದುರಿಸಿದ್ದೀರಿ, ಈ ಸಮಸ್ಯೆಗಳ ಪರಿಹಾರಕ್ಕೆ ಏನೇನು ಕ್ರಮ ಕೈಗೊಂಡಿದ್ದೀರಿ ಎಂದು ಸಿಎಂ ಪ್ರಶ್ನಿಸಿದರು.